ಪುಸ್ತಕಲೋಕ ದರ್ಶಿನಿ

ಡಾ॥ ಕೆ. ಉಮಾಪತಿ ಶೆಟ್ಟಿ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಪುಸ್ತಕ ಲೋಕದರ್ಶಿನಿ

ಡಾ|| ಕೆ. ಉಮಾಪತಿ ಶೆಟ್ಟಿ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

PUSTAKA LOKADARASHINI: By Dr. K. Umapathi Setty
Published by the Bangalore University, Bangalore
Pp. 79 + vii

ಪ್ರಕಾಶಕರು :

ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು-560056

ಬೆಲೆ: 50 ಪೈಸೆ

ಮುದ್ರಕರು :

ಕರಿಘಟ್ಟ ಎಂಟರ್‌ಪ್ರೈಸಸ್
ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರ ಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರಿಯವಾಗಿ ಪಾಲ್ಗೊ ಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆ ಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವ ವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯ ಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣಿತರಾದವರು ಭಾಷಣಗಳನ್ನು ನೀಡಿ ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊ ಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈ ಸೇರಲೆಂದು ಈ ಕಿರು ಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆ ಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನ ಸಾರೆ ಹಾರೈಸುತ್ತೇನೆ.

ಟಿ. ಆರ್. ಜಯರಾಮನ್

ಉಪಕುಲಪತಿ

ನಾಲ್ಕು ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುದರ ಜೊತೆಗೆ ಇತರೆ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನವಿಕಶಾಸ್ತ್ರ ಮುಂತಾದ ವಿಷಯಗಳ ಮೇಲೆ ಪ್ರಸಾರಾಂಗವು ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ. ಮುಂದೆಯೂ ಇಂಥ ಹಲವಾರು ವಿಷಯಗಳ ಮೇಲೆ ಮಹತ್ತರವಾದ ಹೊತ್ತಿಗೆಗಳನ್ನು ಪ್ರಕಟಿಸಬೇಕೆಂಬ ಮಹೋದ್ದೇಶವನ್ನು ಪ್ರಸಾರಾಂಗ ಹೊಂದಿದೆ.

ಪ್ರಸ್ತುತ ಈ 'ಪುಸ್ತಕ ಲೋಕದರ್ಶಿನಿ' ಕೃತಿಯು ನಮ್ಮ ಪ್ರಚಾರೋಪನ್ಯಾಸ ಮಾಲೆಯ ಪ್ರಮುಖ ಕೃತಿಗಳೊಲ್ಲೊಂದಾಗಿದೆ. ಇದರ ಲೇಖಕರಾದ ಡಾ॥ ಉಮಾಪತಿ ಶೆಟ್ಟಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುವುದರ ಜೊತೆಗೆ ಅವರ ಸಹಕಾರಕ್ಕೂ ನಾನು ತುಂಬಾ ಆಭಾರಿ. ಈ ಕೃತಿಯನ್ನು ಮುದ್ರಿಸಿಕೊಟ್ಟ ಕರಿಘಟ್ಟ ಎಂಟರ್‌ಪ್ರೈಸಸ್ ಮುದ್ರಣಾಲಯದವರಿಗೂ ನನ್ನ ವಂದನೆಗಳು.

ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ

ಅರಿಕೆ

ಈ ನನ್ನ ಪುಸ್ತಕದ ವಿಷಯದ ಮುಖ್ಯ ಗುರಿ ವಿವಿಧ ರೀತಿಯ ಸಮಾಚಾರ ಮೂಲಕ ಪ್ರಕಾರಗಳ ಲಘು ಪರಿಚಯ ವೇ ಹೊರತು ವಿವಿಧ ಪ್ರಕಾರಗಳಲ್ಲಿರುವ ಕನ್ನಡ ಅಥವಾ ಇಂಗ್ಲೀಷ್ ಆಕರ ಗ್ರಂಥಗಳ ಸಮಗ್ರ ಪರಿಚಯ ಅಥವಾ ಉಲ್ಲೇಖನ ಅಲ್ಲ. ಈ ನನ್ನ ಉದ್ದೇಶ ವಿದ್ಯಾರ್ಥಿಗಳಿಗೆ ಹಾಗೂ ಉಪಾಧ್ಯಾಯರಿಗೆ ಪ್ರಯೋಜನಕ್ಕೆ ಬಂದರೆ ಕೃತಿಕಾರನ ಶ್ರಮ ಸಾರ್ಥಕವಾಯಿತು.

ಈ ನನ್ನ ಹೊತ್ತಿಗೆಯನ್ನು ಪ್ರಚಾರೋಪನ್ಯಾಸ ಮಾಲೆ ಯಲ್ಲಿ ಪ್ರಕಟಿಸಲು ಒಪ್ಪಿ, ಮುಂದೆ ಬಂದು ನೆರವಾದ ಬೆಂಗಳೂರು ವಿಶ್ವ ವಿದ್ಯಾಲಯದ ಪ್ರಸಾರಾಂಗ ವಿಭಾಗದ ನಿರ್ದೇಶಕರಾದ ಶ್ರೀ ಹೆಚ್. ಆರ್. ದಾಸೇಗೌಡ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಡಾ|| ಕೆ. ಉಮಾಪತಿ ಶೆಟ್ಟಿ

ಪರಿವಿಡಿ

ಪುಸ್ತಕಪ್ರಪಂಚದ ದಾರಿದೀಪಗಳು: ಪುಸ್ತಕ ಸೂಚಿ, ಲೇಖನ ಸೂಚಿಗಳು

ಪ್ರತಿ ವರ್ಷ ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಪುಸ್ತಕಗಳು ಪ್ರಪಂಚಾದ್ಯಂತ ನಾನಾ ಭಾಷೆಗಳಲ್ಲಿ ಪ್ರಕಟವಾಗುತ್ತಿವೆ[1]. ಭಾರತದಲ್ಲಿ ಪ್ರತಿ ವರ್ಷ ಸರಾಸರಿ ಹದಿಮೂರು ಸಾವಿರಕ್ಕೂ ಹೆಚ್ಚಿನ ಪುಸ್ತಕಗಳು ಈ ದಶಕದಲ್ಲಿ ಪ್ರಕಟವಾಗುತ್ತಿವೆ[2]. 1950 ರಿಂದ 1970ರ ಅವಧಿಯಲ್ಲಿ ಪ್ರಪಂಚದ ಪುಸ್ತಕ ಪ್ರಕಟಣೆ ಶೇ. 400 ರಷ್ಟು ಹೆಚ್ಚಿದೆ. ಮುದ್ರಣಯಂತ್ರ ಅಸ್ತಿತ್ವಕ್ಕೆ ಬಂದಂದಿನಿಂದ ಇಂದಿನವರೆಗೆ ಸುಮಾರು ಮೂರು ಕೋಟಿ ಪುಸ್ತಕಗಳು ಅಚ್ಚಾಗಿವೆ ಎಂದು ಒಂದು ಅಂದಾಜು[3]. ಈ ಅಪಾರ ಸಂಖ್ಯೆಯ ಪುಸ್ತಕಪ್ರಪಂಚದಲ್ಲಿ ಪುಸ್ತಕ ಸೂಚಿಗಳೇ ನಮ್ಮ ದಾರಿದೀಪಗಳು. ಅವುಗಳ ಸಹಾಯ ಇಲ್ಲವಾದರೆ ಮಹಾರಣ್ಯದಲ್ಲಿ ದಾರಿತಪ್ಪಿ ತೊಳಲುವ ಪ್ರಯಾಣಿಕನಂತೆ ಪಂಡಿತ ಪಾಮರರು ಪುಸ್ತಕ ಲೋಕದಲ್ಲಿ ದಿಕ್ಕು ಕಾಣದೆ ಅಲೆಯಬೇಕಾಗುತ್ತದೆ. ಆದ್ದರಿಂದಲೇ ಎಂದಿಗಿಂತಲೂ ಇಂದು ಪುಸ್ತಕಸೂಚಿಗಳ ಅವಶ್ಯಕತೆ ಹೆಚ್ಚು.

---

1. Ronald Barker and Robert Escarpit eds.
   The Book Hunger. Paris : UNESCO, 1973 P. 1.
2. UNESCO Statistical Year Book 1975.
   Paris : UNESCO, 1976 P. 585.
3. William A Katz.
   Introduction to Reference Work : Basic Information Sources.
   New York : Mc Graw Hill, 1974. Vol 1. P. 26.

ಕೆಲವರಿಗೆ ತಮಗೆ ಬೇಕಾದ ಪುಸ್ತಕದ ಹೆಸರು ತಿಳಿದಿದ್ದರೆ ಮತ್ತೆ ಕೆಲವರಿಗೆ ಆ ಪುಸ್ತಕದ ಕರ್ತೃವಿನ ಹೆಸರು ಮಾತ್ರ ತಿಳಿದಿರುತ್ತದೆ. ಹಲವರಿಗೆ ಎರಡೂ ತಿಳಿಯದಿದ್ದರೂ ಪುಸ್ತಕದ ವಿಷಯ, ಅದು ಕತೆಯೋ ಕಾದಂಬರಿಯೋ, ಚರಿತ್ರೆಯೋ ಎಂಬುದು ತಿಳಿದಿರುತ್ತದೆ. ಪುಸ್ತಕಾಲಯದ ಕ್ಯಾಟಲಾಗನ್ನು ನೋಡಿ ಆ ಪುಸ್ತಕ ಅಲ್ಲಿದೆಯೋ ಇಲ್ಲವೋ ಎಂಬುದನ್ನು ಪತ್ತೆ ಮಾಡಬಹುದು. ಪುಸ್ತಕಾಲಯದಲ್ಲಿ ಆ ಪುಸ್ತಕ ಇಲ್ಲವಾದಲ್ಲಿ ಅದರ ವಿಚಾರ ತಿಳಿಯಲು ಪುಸ್ತಕ ವಿವರಣ ಸೂಚಿಗಳ ಸಹಾಯ ಅಗತ್ಯವಾಗುತ್ತದೆ. ಕ್ರಮಬದ್ಧವಾದ ಪುಸ್ತಕಗಳ ವಿವರಣ ಪಟ್ಟಿಯೇ ಪುಸ್ತಕ ವಿವರಣ ಸೂಚಿ. ನಮಗೆ ಬೇಕಾದ ಪುಸ್ತಕ ಇದೆಯೋ ಇಲ್ಲವೋ, ಇದ್ದರೆ ಎಲ್ಲಿ ದೊರೆಯಬಹುದು, ಅದರ ಲೇಖಕ ಯಾರು? ಪ್ರಕಾಶಕ ಯಾರು? ಪ್ರಕಟವಾದ ಸ್ಥಳ ಯಾವುದು ಮುಂತಾದ ವಿವರಗಳನ್ನು ಪುಸ್ತಕ ವಿವರಣ ಸೂಚಿ ತಿಳಿಸುತ್ತದೆ. ನಮಗೆ ಬೇಕಾದ ಪುಸ್ತಕಗಳ ಆಯ್ಕೆ ಮಾಡಲೂ ಪುಸ್ತಕ ವಿವರಣ ಸೂಚಿ ಸಹಾಯ ಮಾಡುತ್ತದೆ. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಕನ್ನಡ ಗ್ರಂಥ ಸೂಚಿ 1969-71'ರಿಂದ ಒಂದು ಪುಸ್ತಕದ ವಿವರ ನಿರೂಪಣೆಯನ್ನು ಇಲ್ಲಿ ಉದಹರಿಸಲಾಗಿದೆ.

ಲೇಖಕರ ಹೆಸರು, ಕಾವ್ಯಾನಾಮ: ಬೇಂದ್ರೆ, ದತ್ತಾತ್ರೇಯ ರಾಮಚಂದ್ರ (ಅಂಬಿಕಾತನಯದತ್ತ)

ಪುಸ್ತಕದ ಹೆಸರು: ಇದು ನಭೋವಾಣಿ

ಹುಟ್ಟಿದ ತಾರೀಖು: 1896

ಪ್ರಕಾಶರು: ಸಮಾಜ ಪುಸ್ತಕಾಲಯ

ಪ್ರಕಟವಾದ ಸ್ಥಳ: ಧಾರವಾಡ

ಪ್ರಕಟವಾದ ವರ್ಷ: 1970

ಪುಟ ಸಂಖ್ಯೆ: 14 + 64 ಆಕಾರ: 18 × 12 ಬೆಲೆ: 3-00

ಪುಸ್ತಕದಲ್ಲಿ ಏನಿದೆ ಎಂಬುದರ ವಿವರಣೆ: ಮಹಾನುಭಾವರು, ಇಮ ನಭೋವಾಣಿ, ಧ್ರುವತಾರೆ, ಮೊದಲಾದ 34 ಕವಿತೆಗಳು.

ಪುಸ್ತಕ ವಿವರಣ ಸೂಚಿಗಳು ಮೇಲಿನ ಅಂಶಗಳನ್ನಷ್ಟೇ ಅಲ್ಲದೆ ನಾನಾರೀತಿಯ ಅಂಶಗಳನ್ನು ತಮ್ಮ ಘೋಷಿತ ಉದ್ದೇಶಕ್ಕನುಸಾರವಾಗಿ ತಿಳಿಸಬಹುದು.

ಪುಸ್ತಕಸೂಚಿಗಳ ವೈವಿಧ್ಯತೆ

ಪರಿಚಯಾತ್ಮಕ ಪುಸ್ತಕ ವಿವರಣ ಸೂಚಿ, ಪುಸ್ತಕದ ಬಾಹ್ಯ ಸ್ವರೂಪ ಪರಿಚಯ ಮಾಡಿಕೊಡುತ್ತದೆ. ಕೆಲವು ಪುಸ್ತಕ ಸೂಚಿಗಳು ಪುಸ್ತಕ ಅಚ್ಚಾಗಿರುವ ಕಾಗದ, ಮಸಿ, ಮುದ್ರಣಕ್ಕೆ ಉಪಯೋಗಿಸಿರುವ ಅಚ್ಚಿನ ಮೊಳೆ ಇತ್ಯಾದಿಗಳ ದೀರ್ಘ ವಿವರಣೆ ಕೊಡುತ್ತವೆ. ಮುದ್ರಣ ಯಂತ್ರ ಕಂಡು ಹಿಡಿದಾಗ ಆರಂಭದಲ್ಲಿ ಪ್ರಕಟವಾದ ಪುಸ್ತಕಗಳು ಈಗ ಅಪೂರ್ವ ಗ್ರಂಥಗಳೆನಿಸಿ ಅವಕ್ಕೆ ಹೆಚ್ಚಿನ ಬೇಡಿಕೆಯೂ, ಅಪಾರ ಬೆಲೆಯೂ ಇದೆ. ಅಂಥ ಗ್ರಂಥಗಳು ನಿಜವಾಗಿ ಶತಮಾನಗಳ ಹಿಂದೆ ಅಚ್ಚಾದವೇ ಅಥವ ನಕಲಿ ಮಾಲೇ ಎಂಬುದನ್ನು ಪತ್ತೆಮಾಡಲು ಇಂಥ ಪುಸ್ತಕ ವಿವರಣ ಸೂಚಿಗಳು ಸಹಾಯಕ. ಪಾಠ ನಿರ್ಣಯಸೂಚಿ, ಗ್ರಂಥಾಂತರಂಗ ಪರಿಶೀಲಿಸಿ ಮುದ್ರಿತ ಪುಸ್ತಕಕ್ಕೂ ಹಸ್ತಪ್ರತಿಗೂ ಇರುವ

ಪೋಲಿಕೆ ವ್ಯತ್ಯಾಸಗಳು, ಒಂದೇ ಪುಸ್ತಕದ ಹಲವು ಮುದ್ರಣ ಗಳ ನಡುವೆ ಇರುವ ವ್ಯತ್ಯಾಸಗಳು, ಅರ್ಥ ವಿವರಣೆ ಇತ್ಯಾದಿ ಗಳನ್ನು ತಿಳಿಸುತ್ತದೆ. ಇನ್ನು ಕೆಲವು ಪುಸ್ತಕವಿವರಣ ಸೂಚಿ ಗಳು ಪುಸ್ತಕಗಳನ್ನು ವಿಮರ್ಶಾ ದೃಷ್ಟಿಯಿಂದ ನೋಡಿ ಅವು ಗಳ ವಿವರಣೆ ಕೊಡುತ್ತವೆ. ಒಂದೇ ವಿಷಯವನ್ನು ಕುರಿತ ಪುಸ್ತಕವಿವರಣ ಸೂಚಿ. ಒಬ್ಬನೇ ಲೇಖಕನ ಕೃತಿಗಳ ಪುಸ್ತಕ ವಿವರಣ ಸೂಚಿಗಳೂ ಉಂಟು. ಹಲವು ಅಂಶಗಳನ್ನು ಒಳಗೊಂಡ ಪುಸ್ತಕ ಸೂಚಿಗಳೂ ಇವೆ.

ಸರ್ವವ್ಯಾಪಿ ಪುಸ್ತಕಸೂಚಿ

ಸರ್ವವ್ಯಾಪಿ ಪುಸ್ತಕಸೂಚಿ ಪ್ರಪಂಚದ ಎಲ್ಲ ಪುಸ್ತಕಗಳ ಪಟ್ಟಿಯನ್ನು ಕೊಡಬೇಕಾದರೂ ಅಂಥ ಪುಸ್ತಕಸೂಚಿ ಇನ್ನೂ ಆದರ್ಶ ಪ್ರಪಂಚದ್ದೇ ಆಗಿದೆ. ಸಾಮಾನ್ಯವಾಗಿ ಸರ್ವವ್ಯಾಪಿ ಪುಸ್ತಕ ಸೂಚಿ ಪುಸ್ತಕಗಳ ಕಾಲ. ಭಾಷೆ, ಪ್ರಕಟವಾದ ರಾಷ್ಟ್ರ. ವಿಷಯ, ಅಥವ ರೂಪಗಳಿಗೆ ಕಟ್ಟು ಬೀಳದೆ ಎಲ್ಲವನ್ನೂ ಒಳಗೊಂಡಿರುತ್ತದೆ. ಅಮೇರಿಕ, ಇಂಗ್ಲೆಂಡ್. ಫ್ರಾನ್ಸ್. ರಷ್ಯ, ಭಾರತ ಇಂಥ ರಾಷ್ಟ್ರಗಳ ರಾಷ್ಟ್ರೀಯ ಪುಸ್ತಕಾಲಯ ಗಳ ಪುಸ್ತಕ ಸೂಚಿಗಳು ಅನೇಕ ವಿಧಗಳಲ್ಲಿ ಸರ್ವವ್ಯಾಪಿ ಪುಸ್ತಕಸೂಚಿಗಳು. ಕೆಲವು ಪುಸ್ತಕಸೂಚಿಗಳು ಒಂದು ರಾಷ್ಟ್ರ ದಲ್ಲಿ ಮಾತ್ರ ಪ್ರಕಟವಾಗುವ ಪುಸ್ತಕಗಳ ವಿವರ ಮಾತ್ರ ಕೊಡುತ್ತವೆ. “ಭಾರತ ರಾಷ್ಟ್ರೀಯ ಪುಸ್ತಕಸೂಚಿ” ಇಂಥದ್ದು. ಭಾರತದಲ್ಲಿ ಪ್ರಕಟವಾಗುವ ಎಲ್ಲ ಭಾಷೆಗಳ ಪುಸ್ತಕಗಳ ಕ್ರಮ ಬದ್ಧ ಪಟ್ಟಿಗಳು ಇವರಲ್ಲಿರುತ್ತವೆ. 1976ರಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ವಿವರಕ್ಕೆ ಇದು ಉತ್ತಮ ಸಾಧಾರ

ಮೂಲ. ಹಲವು ರಾಷ್ಟ್ರಗಳ ಪುಸ್ತಕ ಪ್ರಕಾಶಕರು ತಮ್ಮ ಪ್ರಕಟಣೆಗಳೆಲ್ಲವುಗಳ ಕ್ರೋಢೀಕೃತ ಪಟ್ಟಿಗಳನ್ನು ಪ್ರಕಟಿಸುತ್ತಿದ್ದು ರಾಷ್ಟ್ರೀಯ ಪುಸ್ತಕ ಸೂಚಿಯಂತೆಯೇ ಇದೂ ಸಹಾಯಕಾರಿ. ಅಮೇರಿಕೆಯ Books in Print ಇಂಥ ಒಂದು ಉದಾಹರಣೆ. ಹಲವು ಪುಸ್ತಕ ಸೂಚಿಗಳು ಹಿಂದೆ ಪ್ರಕಟವಾದ ಪುಸ್ತಕಗಳಿಗೆ ಮಾತ್ರ ಮೀಸಲಾದರೆ ಕೆಲವು ಸಮಕಾಲೀನ ಪ್ರಕಟಣೆಗಳಿಗೋ, ಮುಂದೆ ಪ್ರಕಟವಾಗಲಿರುವ ಪುಸ್ತಕಗಳ ವಿವರಣೆಗೋ ಮೀಸಲಾಗಿರುತ್ತವೆ.

ಪುಸ್ತಕವಿವರಣ ಸೂಚಿಗಳು ಜ್ಞಾನಲೋಕದ ಎಲ್ಲ ವಿಭಾಗಗಳನ್ನೂ ಪ್ರತಿನಿಧಿಸುವ ಗುರಿ ಹೊಂದಿರಬಹುದು ಅಥವ ಒಂದು ಅಥವಾ ಕೆಲವು ವಿಷಯಗಳಿಗೆ ಮಾತ್ರ ಸಂಬಂಧ ಪಟ್ಟ ಪುಸ್ತಕಗಳ ಪಟ್ಟಿಗಳಷ್ಟೇ ಆಗಿರಬಹುದು. ತಂಜಾವೂರಿನ ಸರಸ್ವತಿ ಮಹಲ್ ಪುಸ್ತಕಾಲಯದ "ತಮಿಳು ಹಸ್ತಪ್ರತಿಗಳ ಪರಿಚಯಾತ್ಮಕ ಸೂಚಿ" ಕೇವಲ ತಮಿಳು ಹಸ್ತ ಪ್ರತಿಗಳಿಗೆ ಮಾತ್ರ ಸೀಮಿತವಾಗಿದ್ದರೆ, ದೇ.ವೀರಪ್ಪನವರ "ಕನ್ನಡ ಹಸ್ತ ಪ್ರತಿಗಳ ವರ್ಣನಾತ್ಮಕ ಸೂಚಿ" ಹೆಸರೇ ಹೇಳುವಂತೆ ಕನ್ನಡ ಹಸ್ತಪ್ರತಿಗಳಿಗೆ ಮಾತ್ರ ಸೀಮಿತವಾಗಿದೆ. ಕೇವಲ ಚರಿತ್ರೆಯ ಪುಸ್ತಕಗಳನ್ನೋ, ಪ್ರಾಣಿಶಾಸ್ತ್ರದ ಪುಸ್ತಕಗಳನ್ನೋ ಸೂಚಿಸುವ ಪುಸ್ತಕ ಸೂಚಿಗಳು ಸಾಮಾನ್ಯ. ಅಶೋಕನ ಆಡಳಿತಕ್ಕೆ ಸಂಬಂಧಪಟ್ಟ ಪುಸ್ತಕಗಳು, ಮಹಾತ್ಮಗಾಂಧಿಯವರ ಉಪ್ಪಿನ ಸತ್ಯಾಗ್ರಹಕ್ಕೆ ಮಾತ್ರ ಮೀಸಲಾದ ಗ್ರಂಥಗಳು, ಅರವಿಂದರ ತತ್ವ ವಿಚಾರ ವಿಮರ್ಶೆಯ ಪುಸ್ತಕಗಳು—ಇತ್ಯಾದಿ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕ ವಿವರಣ ಸೂಚಿ ಗಳು ಅಸಂಖ್ಯಾತವಾಗಿವೆ. ಕಾಲೇಜು ವಿದ್ಯಾರ್ಥಿಗಳಿಗಾಗಿಯೇ

ಆರಿಸಿದ ಕಾದಂಬರಿಗಳನ್ನು ಮಾತ್ರ ಪಟ್ಟಿಮಾಡಿ ಕೊಡುವ ಸೂಚಿ ಇರಬಹುದು. ಅವುಗಳ ವೈವಿಧ್ಯತೆಗೆ ಕೊನೆ ಇಲ್ಲ.

ಪುಸ್ತಕ ವಿವರಣ ಸೂಚಿಗಳ ಸೂಚಿಗಳು

ಪುಸ್ತಕ ಪ್ರಪಂಚದ ಅಪಾರತೆಯಿಂದ ಪುಸ್ತಕ ವಿವರಣ ಸೂಚಿಗಳ ಅವಶ್ಯಕತೆ ಇರುವಂತೆಯೇ ಅಸಂಖ್ಯಾತ ಪುಸ್ತಕ ವಿವರಣ ಸೂಚಿಗಳನ್ನು ಕಂಡುಕೊಂಡು ನಮಗೆ ಬೇಕಾದ ಪುಸ್ತಕ ಸೂಚಿಯನ್ನು ಆರಿಸಿಕೊಳ್ಳಲು ಅನುಕೂಲವಾಗಲೆಂದು ಪುಸ್ತಕ ಸೂಚಿಗಳ ಸೂಚಿಗಳಿವೆ. ನಾನಾ ವಿಷಯಗಳನ್ನು ಕುರಿತ ಪುಸ್ತಕ ವಿವರಣ ಸೂಚಿಗಳ ಪಟ್ಟಿಗಳನ್ನು ಕ್ರಮಬದ್ಧ ರೀತಿಯಲ್ಲಿ ಇವು ಕೊಡುತ್ತವೆ. ಥಿಯೊಡರ್ ಬೆಸ್ಟರ್‌ಮನ್ ರವರ 'ಪುಸ್ತಕ ವಿವರಣ ಸೂಚಿಗಳ ಪ್ರಪಂಚ ಪುಸ್ತಕ ಸೂಚಿ' (A World Bibliography of Bibliographies) ಇಂಥ ಪುಸ್ತಕ ಸೂಚಿಗಳ ಸೂಚಿ. ಪ್ರಪಂಚದ ನಲವತ್ತು ಭಾಷೆಗಳಲ್ಲಿ ಪ್ರಕಟವಾಗಿರುವ ಪುಸ್ತಕ ಸೂಚಿಗಳ ಪಟ್ಟಿ ಇದು.

ಸಹಸ್ರ ಸಂಖ್ಯೆಯ ಪುಸ್ತಕಗಳಲ್ಲಿಯೂ, ನಿಯತಕಾಲಿಕ ಲೇಖನಗಳಲ್ಲಿಯೂ ಆಯಾ ಲೇಖನ ವಿಷಯಗಳಿಗೆ ಸಂಬಂಧ ಪಟ್ಟ ಪುಸ್ತಕ ಪಟ್ಟಿಗಳು ಸದಾ ಪ್ರಕಟವಾಗುತ್ತಿರುತ್ತವೆ. ಸಮಕಾಲೀನತೆ ಇವುಗಳ ಉಪಯುಕ್ತತೆಯನ್ನು ಹೆಚ್ಚಿಸುತ್ತದೆ. ಇಂತಹ ಪುಸ್ತಕ ಸೂಚಿಗಳನ್ನು ನೇರವಾಗಿ ಹುಡುಕುವುದೆಂದರೆ ಹುಲ್ಲಿನ ಮಹಾರಾಶಿಯಲ್ಲಿ ಸೂಜಿಯನ್ನು ಹುಡುಕಿದಂತೆಯೇ. ಇಂಥ ಪುಸ್ತಕ ಸೂಚಿಗಳನ್ನು ಸಂಗ್ರಹಿಸಿ ಶಾಸ್ತ್ರೀಯ ರೀತಿಯಲ್ಲಿ ಒದಗಿಸಲೆಂದೇ ಕೆಲವು ಪುಸ್ತಕ ಸೂಚಿಗಳ ಸೂಚಿಗಳಿರು

ತ್ತವೆ. ಅಮೆರಿಕದ ವಿಲ್ಸನ್ ಕಂಪನಿಯು 'ಪುಸ್ತಕ ವಿವರಣ ಸೂಚಿಗಳ' ಸೂಚಿ (Bibliographic Index) ನಿಯತಕಾಲಿಕ, ಇಂಥ ಪುಸ್ತಕ ಪಟ್ಟಿಗಳ ಸೂಚಿ. ಪುಸ್ತಕ ಪಟ್ಟಿ ಒಬ್ಬ ಮನುಷ್ಯನನ್ನು ಕುರಿತದ್ದೋ, ಒಂದು ಸ್ಥಳಕ್ಕೆ ಸಂಬಂಧಪಟ್ಟದ್ದೋ ಅಥವ ಒಂದು ವಿಷಯಕ್ಕೆ ಸಂಬಂಧಪಟ್ಟದ್ದೋ ಆಗಿರಬಹುದು.

ಆಕರ ಗ್ರಂಥ ವಿವರಣ ಸೂಚಿ

ಪುಸ್ತಕ ಪ್ರಪಂಚದಲ್ಲಿ ಆಕರ ಗ್ರಂಥಗಳೇ ಸಹಸ್ರ ಸಂಖ್ಯೆಯಲ್ಲಿದ್ದು ಅವುಗಳ ಬಗ್ಗೆ ಸೂಚನೆಕೊಟ್ಟು ಸಹಾಯ ಮಾಡಲೆಂದೇ ಹಲವು ಪುಸ್ತಕ ಪಟ್ಟಿಗಳಿವೆ. ಹೆಚ್. ಡಿ. ಶರ್ಮರ 'ಭಾರತೀಯ ಆಕರ ಮೂಲಗಳು' (Indian Reference Sources); ವಾಲ್ಫರ್ಡ್ ಅವರ 'ಆಕರ ಮೂಲಗಳ ಕೈಪಿಡಿ' (Guide to Reference Materials) ಮತ್ತು ವಿಂಚೆಲ್‌ರ 'ಆಕರ ಗ್ರಂಥ ಕೈಪಿಡಿ' (Guide to Reference Books) ಇಂಥ ಪ್ರಮುಖ ಉದಾಹರಣೆಗಳು. ಇವುಗಳ ಪರಿಶೀಲನೆಯಿಂದ ನಮ್ಮ ಆಸಕ್ತಿಗೆ ಅನುಗುಣವಾದ ಆಕರ ಗ್ರಂಥಗಳು ಯಾವುವು ಎಂಬುದನ್ನು ನಾವು ಸುಲಭವಾಗಿ ಕಂಡುಕೊಳ್ಳಬಹುದು. ಅವುಗಳ ಸಾರ್ಥಕ ಉಪಯೋಗಕ್ಕೆ ಇದು ಮೊದಲ ಹೆಜ್ಜೆ.

ಸಂಯುಕ್ತ ಪುಸ್ತಕ ವಿವರಣ ಸೂಚಿಗಳು

ಪ್ರಪಂಚದ ಪುಸ್ತಕ ಸಂಪತ್ತು ಅನೇಕ ಪುಸ್ತಕಾಲಯಗಳಲ್ಲಿ ಸೇರಿದ್ದು ವಾಚಕರ ಉಪಯೋಗಕ್ಕೆ ಲಭ್ಯವಿದೆ.

ಪುಸ್ತಕಾಲಯಗಳು ದೇಶವಿದೇಶಗಳಲ್ಲಿದ್ದು ಅವುಗಳ ಪುಸ್ತಕ ಪಟ್ಟಿಗಳು ಸಿಕ್ಕಲ್ಲಿ ಮಾತ್ರವೇ ನಮಗೆ ಬೇಕಾದ ಪುಸ್ತಕ ಇದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಸಾಧ್ಯ. ಇಂಥ ತಿಳಿವು ನಮಗೆ ಬೇಕಾದ ಪುಸ್ತಕ ಪಡೆಯಲು ಅಗತ್ಯ. ಪುಸ್ತಕ ಯಾವುದೋ ಪುಸ್ತಕಾಲಯದಲ್ಲಿ ಇದೆಯೆಂದು ತಿಳಿದರೆ ಅದನ್ನು ಅಂತರ ಪುಸ್ತಕಾಲಯ ಎರವಲು ಮೂಲಕ ಪಡೆಯಬಹುದು. ಆದ್ದರಿಂದಲೇ ದೊಡ್ಡ ಪುಸ್ತಕಾಲಯಗಳು ಬ್ರಿಟಿಷ್ ಮ್ಯೂಸಿಯಂ, ಅಮೆರಿಕ ಕಾಂಗ್ರೆಸ್ ಲೈಬ್ರರಿ ಮುಂತಾದ ಬೃಹತ್ ಪುಸ್ತಕಾಲಯಗಳ ಪುಸ್ತಕ ಪಟ್ಟಿಗಳನ್ನು ಇಟ್ಟುಕೊಂಡಿರುತ್ತವೆ. ವಾಚಕರ ಉಪಯೋಗಕ್ಕೂ ಅವನ್ನು ಒದಗಿಸುತ್ತವೆ. ಅನೇಕ ವೇಳೆ ನಿರ್ದಿಷ್ಟ ಕ್ಷೇತ್ರದ ಹಲವಾರು ಪುಸ್ತಕಾಲಯಗಳು ಸೇರಿ ಸಂಯುಕ್ತ ಪುಸ್ತಕ ವಿವರಣ ಸೂಚಿಗಳನ್ನು ರೂಪಿಸಿಕೊಳ್ಳುತ್ತವೆ. ಇದರಿಂದ ಇಂಥ ಎಲ್ಲ ಪುಸ್ತಕಾಲಯಗಳ ಪುಸ್ತಕ ಸಂಪತ್ತು ಪ್ರತಿಯೊಂದು ಪುಸ್ತಕಾಲಯದ ವಾಚಕರಿಗೂ ಸಿಕ್ಕುವ ಅವಕಾಶ ಉಂಟಾಗುತ್ತದೆ. ಸಂಯುಕ್ತ ಪುಸ್ತಕ ಸೂಚಿಗಳು ಯಾವ ಪುಸ್ತಕ ಯಾವ ಪುಸ್ತಕಾಲಯದಲ್ಲಿದೆ ಎಂಬುದನ್ನು ಸೂಚಿಸುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಹಾಗೂ ಕೆನಡದ ಪ್ರಮುಖ ಪುಸ್ತಕಾಲಯಗಳು ಸೇರಿ ಪ್ರಕಟಿಸಿರುವ 'ರಾಷ್ಟ್ರೀಯ ಸಂಯುಕ್ತ ಪುಸ್ತಕ ಸೂಚಿ' (The National Union Catalogue) ಬೃಹದಾಕಾರದ 184 ಸಂಪುಟಗಳಿವೆ ಎಂಬುದರಿಂದ ಅದರ ವಿಸ್ತಾರ ವೈವಿಧ್ಯತೆಗಳನ್ನು ಊಹಿಸಬಹುದು. ಇಂಥ ಪುಸ್ತಕ ಸೂಚಿಗಳಿಲ್ಲದೆ ನಮ್ಮ ದೃಷ್ಟಿ ವಿಶಾಲವಾಗಲಾರದು. ಪುಸ್ತಕ

ಲೋಕದ ಜ್ಞಾನ ಸಂಪತ್ತು ನಮ್ಮದಾಗಲಾರದು. ಪಾಂಡಿತ್ಯ ಅರಳಲಾರದು. ವಿಜ್ಞಾನ ಬೆಳೆಯಲಾರದು.

ಲೇಖನ ಸೂಚಿಗಳು

ಇಂದು ಪ್ರಕಟವಾಗುತ್ತಿರುವ ಲಕ್ಷ ಸಂಖ್ಯೆಯ ನಿಯತ ಕಾಲಿಕಗಳು, ಬಹುಸಂಖ್ಯಾತ ಬಿಡಿ ಲೇಖನಗಳ ಸಂಕಲನ ಗಳು—ಇವುಗಳಲ್ಲಿನ ಲೇಖನಗಳ ವಿಷಯ ವಿವರ ತಿಳಿಯಲು ಪುಸ್ತಕ ಸೂಚಿಗಳು ಸಹಾಯ ಮಾಡಲಾರವು. ಪುಸ್ತಕಗಳನ್ನು ಕಂಡುಕೊಳ್ಳಲು ಪುಸ್ತಕ ಪಟ್ಟಿಗಳು ಸಹಾಯ ಮಾಡು ವಂತೆಯೇ ಲೇಖನಗಳ ಬೃಹತ್ ಪ್ರಪಂಚದಲ್ಲಿ ಮಾರ್ಗ ದರ್ಶನ ಮಾಡುವ ಉದ್ದೇಶದಿಂದ ಲೇಖನ ಸೂಚಿಗಳು ಹುಟ್ಟಿವೆ. ಪುಸ್ತಕ ಸೂಚಿಗಳಂತೆ ಲೇಖನ ಸೂಚಿಗಳೂ ಎಲ್ಲ ವಿಷಯಗಳನ್ನೂ ಒಳಗೊಂಡಿರಬಹುದು ಅಥವ ಯಾವು ದಾದರೊಂದು ವಿಷಯಕ್ಕೆ ಸೀಮಿತವಾಗಿರಬಹುದು. 1848 ರಲ್ಲಿ ವಿಲಿಯಂ ಪೂಲ್ ಎಂಬ ಗ್ರಂಥಾಲಯ ವಿಜ್ಞಾನಿ ಅಮೆರಿಕೆ ಯಲ್ಲಿ ಮೊದಲಬಾರಿ ಇಂಥ ಲೇಖನ ಸೂಚಿಯೊಂದನ್ನು ಪ್ರಕಟಿಸಿದ. ಇಂದು ಲೇಖನ ಸೂಚಿಗಳು ಪುಸ್ತಕ ಸೂಚಿ ಗಳಷ್ಟೇ ವ್ಯಾಪಕವಾಗಿ ಬೆಳೆದಿದ್ದು ಉಪಯುಕ್ತವೆನಿಸಿವೆ. ಲೇಖನ ಸೂಚಿಗಳು ಗತಕಾಲದ ಪ್ರಕಟಣೆಗಳಿಗೋ, ಸಮ ಕಾಲೀನ ಪ್ರಕಟಣೆಗಳಿಗೋ ಮಿತಗೊಂಡಿರಬಹುದು. 'ಇಂಡಿಯ ಸೂಚಿ' (Iedex India) ಜನವರಿ–ಜೂನ್ 1972 ರ ಸಂಚಿಕೆಯಿಂದ ಲೇಖನ ಸೂಚಿಯೊಂದನ್ನಿಲ್ಲಿ ಉದಹರಿಸ ಲಾಗಿದೆ.

ಲೇಖಕರ ಹೆಸರು: Singh, L. R.

ಲೇಖನದ ಹೆಸರು: Appraisal of Population Growth and Food Problem in India

ಲೇಖನ ಪ್ರಕಟ ಆಗಿರುವ ನಿಯತಕಾಲಿಕದ ಹೆಸರು: Geography Teacher

ಸಂಚಿಕೆ ಸಂಖ್ಯೆ: 7 ಸಂಪುಟ ಸಂಖ್ಯೆ: (3)

ಪ್ರಕಟವಾದ ವರ್ಷ ಮತ್ತು ತಿಂಗಳು: 72 Ap. My.

ಲೇಖನ ಅಚ್ಚಾಗಿರುವ ಪುಟ ಸಂಖ್ಯೆ: 131-42

'ಭಾರತೀಯ ನಿಯತ ಕಾಲಿಕ ಸಾಹಿತ್ಯ ಕೈಪಿಡಿ' (Guide to Indian Periodical Literature) ಲಲಿತಕಲೆ ಸಮಾಜ ಶಾಸ್ತ್ರಗಳು. ಸಾಹಿತ್ಯಗಳಿಗೆ ಮೀಸಲಾದ ನಿರ್ದಿಷ್ಟ ನಿಯತ ಕಾಲಿಕಗಳಲ್ಲಿ ಪ್ರಕಟವಾಗುವ ಲೇಖನಗಳ ಸೂಚಿ ಆದರೆ, 'ವಾಣಿಜ್ಯ ನಿಯತ ಕಾಲಿಕ ಲೇಖನಗಳ ಸೂಚಿ' (Business Periodicals Index) ವ್ಯಾಪಾರ ವಾಣಿಜ್ಯೋದ್ಯಮ, ನಿಯತ ಕಾಲಿಕಗಳಲ್ಲಿನ ಲೇಖನಗಳ ವಿವರ ಒದಗಿಸುತ್ತದೆ. ಪುಸ್ತಕ ಸೂಚಿಗಳಂತೆಯೇ ಲೇಖನ ಸೂಚಿಗಳಲ್ಲೂ ಹಿಂದೆ ಪ್ರಕಟವಾದ ಲೇಖನಗಳ ಸೂಚಿಗಳೂ, ಸಮಕಾಲೀನ ಪ್ರಕಟಣೆಗಳ ಸೂಚಿಗಳೂ ಉಂಟು. ವೆಂಕಟರಮಣಯ್ಯನವರ 'ಕನ್ನಡ ಭಾಷಾ–ಸಾಹಿತ್ಯ ಲೇಖನ ಸೂಚಿ' ಸುಮಾರು 10,000 ಲೇಖನಗಳ ಸೂಚಿ ಕನ್ನಡದ ಒಂದು ವಿಶಿಷ್ಟ ಪ್ರಕಟಣೆ.

ಲೇಖನ ಸಂಕಲನಗಳು ಬಹು ಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದು ಪುಸ್ತಕಾಲಯಗಳ ಕ್ಯಾಟಲಾಗುಗಳಾಗಲೀ, ಪುಸ್ತಕ ಸೂಚಿ, ಲೇಖನಸೂಚಿಗಳಾಗಲೀ ಅಂಥ ಪ್ರಕಟಣೆಗಳಲ್ಲಿನ [illegible]

ಲೇಖನಗಳ ಸೂಚನೆ ಕೊಡಲಾರವು. ಈ ಕೊರತೆ ನಿವಾರಿಸಿ ಸಂಕಲನ ಸಾಹಿತ್ಯಕ್ಕೂ 'ಬೀಗದ ಕೈ' ಒದಗಿಸುವ ಉದ್ದೇಶ ದಿಂದ 'ಪ್ರಬಂಧ ಹಾಗೂ ಸಾಮಾನ್ಯ ಸಾಹಿತ್ಯ ಸೂಚಿ' (Essay and General Literature Index) ಪ್ರಕಟ ಆಗುತ್ತಿದೆ.

ಪುಸ್ತಕ ಹಾಗೂ ಲೇಖನ ಸೂಚಿಗಳು ಸಹಜವಾಗಿಯೇ ಸ್ವಯಂ ನಿರ್ಮಿತ ಚೌಕಟ್ಟಿನಲ್ಲಿ ಕೆಲಸ ಮಾಡುತ್ತವೆ. 'ಪ್ರಬಂಧ ಹಾಗೂ ಸಾಮಾನ್ಯ ಸಾಹಿತ್ಯ ಸೂಚಿ' ಅಮೆರಿಕೆಯ ವಿಲ್ಸನ್ ಕಂಪನಿಯ ಪ್ರಕಟಣೆ ಆಗಿದ್ದು ಅಮೆರಿಕೆಯಲ್ಲಿ ಪ್ರಕಟವಾಗುವ ಸಂಕಲನ ಲೇಖನಗಳನ್ನು ಪತ್ತೆಮಾಡಲು ಉತ್ತಮ ಸಾಧನ. ಭಾರತದಲ್ಲಿ ಪ್ರಕಟವಾದ ಲೇಖನ ಸಂಕಲನದಲ್ಲಿನ ಲೇಖನ ವೊಂದರ ವಿವರವನ್ನದರಲ್ಲಿ ಹುಡುಕುವುದು ವ್ಯರ್ಥವೇ ಸರಿ. ಸಾಮಾನ್ಯವಾಗಿ ಲೇಖನ ಸೂಚಿಗಳು ತಾವು ಯಾವ ನಿಯತ ಕಾಲಿಕಗಳ 'ಲೇಖನಗಳ ಪಟ್ಟಿ ಸೂಚಿಗಳನ್ನು ಕೊಡುತ್ತವೋ ಅಂಥ ನಿಯತಕಾಲಿಕಗಳ ಪಟ್ಟಿಗಳನ್ನು ಪ್ರಕಟಿಸುತ್ತವೆ. ಯಾವ ಸೂಚಿಯನ್ನೇ ಆಗಲಿ ಉಪಯೋಗಿಸುವ ಮೊದಲು ಅದರ ಇತಿ, ಮಿತಿ, ಕಾರ್ಯ ವಿಧಾನಗಳ ವಿವರಣೆಯನ್ನು ಗಮನಿಸಿ ನಮ್ಮ ಅವಶ್ಯಕತೆಗನುಸಾರವಾಗಿ ಅವನ್ನು ಉಪಯೋ ಗಿಸಬೇಕು.

ಪ್ರಪಂಚದ ಕೆಲವು ಪ್ರಖ್ಯಾತ ವೃತ್ತ ಪತ್ರಿಕೆಗಳು ಸುದ್ದಿ ಸೂಚಿಗಳನ್ನು ಪ್ರಕಟಿಸುತಿದ್ದು ಜಗತ್ತಿನ ಸುದ್ದಿ ಹುಡುಕೊಳ್ಳಲು ಇವು ನೆರವಾಗುತ್ತವೆ. ನ್ಯೂಯಾರ್ಕ್ ಟೈಂಸ್‌ನ ದಿನಪತ್ರಿಕೆಯ ಸೂಚಿ ಇಂಥ ಉದಾಹರಣೆ. ಸಾಮಾನ್ಯವಾಗಿ ಜಗತ್ತಿನ ಸುದ್ದಿ ಏಕಕಾಲದಲ್ಲಿ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗುವುದ

ರಿಂದ ಇಂತಹ ಸುದ್ದಿ ಸೂಚಿ ಎಲ್ಲ ಪತ್ರಿಗಳ ಸುದ್ದಿಗೂ ಮಾರ್ಗದರ್ಶಿ ಆಗಬಲ್ಲುದು.

ಲೇಖನ ಸಾರಾಂಶ ಸೂಚಿಗಳು

ನಿರ್ದಿಷ್ಟ ಲೇಖನ ಯಾವ ನಿಯತಕಾಲಿಕದಲ್ಲಿ ಪ್ರಕಟವಾಗಿದೆ, ಬರೆದವರು ಯಾರು, ಪ್ರಕಟಣೆಯ ತಾರೀಖು, ಲೇಖನ ಇರುವ ಪುಟಸಂಖ್ಯೆ ಮುಂತಾದ ವಿವರಗಳನ್ನು ಲೇಖನ ಸೂಚಿ ಕೊಡುವುದಾದರೂ ಲೇಖನದಲ್ಲಿ ಏನಿದೆ ಎಂಬುದರ ವಿವರವನ್ನದು ತಿಳಿಸುವುದಿಲ್ಲ. ಜ್ಞಾನ ಲೋಕದ ಪ್ರತಿ ವಿಭಾಗದಲ್ಲೂ ಹತ್ತಾರು ಸಾವಿರ ಲೇಖನಗಳು ಪ್ರತಿತಿಂಗಳೂ ಪ್ರಕಟವಾಗುತ್ತಿರುವ ಇಂದಿನ ದಿನಗಳಲ್ಲಿ ಇಂಥ ಸೂಚಿ ಉಪಯೋಗಿಸಿ ನಮ್ಮ ಆಸಕ್ತಿ ಇರುವ ವಿಷಯದ ಬಗ್ಗೆ ಪ್ರಕಟವಾಗಿರುವ ಲೇಖನಗಳನ್ನು ಗುರುತಿಸಿ, ನಂತರ ನಿಯತ ಕಾಲಿಕಗಳನ್ನು ಹುಡುಕಿ, ಲೇಖನಗಳನ್ನು ಓದುವುದು ಕಷ್ಟದ ಕೆಲಸ. ಇದಕ್ಕೆ ಹೆಚ್ಚು ಕಾಲವೂ ಬೇಕು. ಇಷ್ಟೆಲ್ಲ ಮಾಡಿದ ನಂತರವೂ ಆ ಲೇಖನಗಳು ಅಷ್ಟೇನೂ ಉಪಯುಕ್ತ ಅಲ್ಲ ಎನಿಸಬಹುದು. ವಾಚಕರಿಗೆ ಹೆಚ್ಚು ಉಪಯೋಗವಾಗಲೆಂದು ಪುಸ್ತಕಸೂಚಿ ಲೇಖನ ಸೂಚಿಗಿಂತ ಮತ್ತೊಂದು ಹೆಜ್ಜೆ ಮುಂದೆ ಹೋಗಿರುವ ವಿದ್ಯಾರ್ಥಿಗಳ, ಪಂಡಿತರ ಕಾಮಧೇನು ಈ ಲೇಖನ ಸಾರಾಂಶ ಸೂಚಿ. ಇದು ಲೇಖನ ಸೂಚಿಯಂತೆಯೇ ಲೇಖನದ ಸಾಮಾನ್ಯ ವಿವರಗಳನ್ನು ಕೊಡುವುದರ ಜೊತೆಗೆ ಲೇಖನದ ಸಾರಾಂಶವನ್ನು ಒದಗಿಸುತ್ತದೆ. ಅದನ್ನು ಓದಿ ಆ ಲೇಖನ ಉಪಯುಕ್ತ ಎಂದು ಕಂಡರೆ ಮಾತ್ರ ಮೂಲ ಲೇಖನ ಹುಡುಕಬಹುದು. ವ್ಯರ್ಥಶ್ರಮವನ್ನು ತಪ್ಪಿಸ

ಬಹುದು. ಇಂಥ ಲೇಖನ ಸಾರಾಂಶ ಸೂಚಿಗಳನ್ನು ಅವಲೋಕಿಸುವುದರಿಂದ ನಮಗೆ ಆಸಕ್ತಿ ಇರುವ ವಿಷಯದಲ್ಲಿ ಆಗುತ್ತಿರುವ ನಿರಂತರ ಬೆಳವಣಿಗೆಗಳನ್ನು ಸಾಕಷ್ಟು ತೃಪ್ತಿಕರ ರೀತಿಯಲ್ಲಿ ತಿಳಿಯಬಹುದು. ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಲೇಖನಗಳ ಸಾರಾಂಶಸೂಚಿ, (Chemical Abstracts) ಮನಶ್ಶಾಸ್ತ್ರ ಲೇಖನಗಳ ಸಾರಾಂಶ ಸೂಚಿ (Psychological Abstracts) ಇಂಥ ಉದಾಹರಣೆಗಳು. ಇಂಥ ಲೇಖನ ಸಾರಾಂಶ ಸೂಚಿಗಳು ನಾನಾ ವಿಷಯಗಳಿಗೆ ಸಂಬಂಧಪಟ್ಟಂತೆ ಅನೇಕವಿವೆ. ಚಾರಿತ್ರಿಕ ಲೇಖನ ಸಾರಾಂಶ ಸೂಚಿ (Historical Abstracts) ಯಿಂದ ಆರಿಸಿದ ಒಂದು ಉದಾಹರಣೆಯನ್ನಿಲ್ಲಿ ಕೊಡಲಾಗಿದೆ.

ಲೇಖಕರ ಹೆಸರು : Srivastava, K. L.

ಲೇಖಕರ ವಿಳಾಸ: (Govt· Post Graduate Coll, Sehore, M· P.)

ಲೇಖನದ ಹೆಸರು : Source Material For The Study of The History of Malwa (1818-1858)

ನಿಯತ ಕಾಲಿಕದ ಹೆಸರು : Q· R· of Hist· Studies (India)

ಪ್ರಕಟವಾದ ವರ್ಷ: 1970/71

ಸಂಚಿಕೆ, ಸಂಪುಟ: 10 (2)

ಲೇಖನ ಇರುವ ಪುಟಸಂಖ್ಯೆ : 68–72

ಲೇಖನದ ಸಾರಾಂಶ: This article describes three main sources for the study of Malwa in the first half of the 19th Century: Government records, state records, and records in private possession. Discusses also old and rare publications on Central India.

ಸಾರಾಂಶ ಸಿದ್ಧಪಡಿಸಿದವರ ಹೆಸರು: J. M. Mc. Carthy.

ಪುಸ್ತಕ ವಿಮರ್ಶೆ ಸೂಚಿಗಳು

ಪುಸ್ತಕ ಪ್ರಪಂಚದಲ್ಲಿ ಪ್ರತಿದಿನ ಪ್ರಕಟವಾಗುವ ನೂರಾರು, ಸಾವಿರಾರು ಪುಸ್ತಕಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕಗಳೇ ಅನೇಕವಿರಬಹುದು. ಅವುಗಳಲ್ಲಿ ಉತ್ತಮವಾದದ್ದನ್ನು ಮಾತ್ರ ಓದುವ ಅಥವಾ ಕೊಳ್ಳುವ ಯೋಜನೆ ನಮಗಿರಬಹುದು. ಇಂಥ ಅನುಕೂಲತೆಯನ್ನು ಪುಸ್ತಕ ವಿಮರ್ಶೆ ಸೂಚಿಗಳು ಒದಗಿಸುತ್ತವೆ. ಪುಸ್ತಕ ವಿಮರ್ಶೆಗಳು ಅನೇಕ ಪತ್ರಿಕೆಗಳಲ್ಲೂ ನಿಯತಕಾಲಿಕಗಳಲ್ಲೂ ಪ್ರಕಟ ಆಗುತ್ತಿರುತ್ತವೆ. ಸಾಮಾನ್ಯವಾಗಿ ಆಯಾ ವಿಷಯಗಳಲ್ಲಿ ಸಾಕಷ್ಟು ಪರಿಶ್ರಮ ಇರುವವರು ಪುಸ್ತಕಗಳನ್ನು ವಿಮರ್ಶಿಸುತ್ತಾರೆ. ಇಂಥ ವಿಮರ್ಶೆಗಳನ್ನು ಪರಿಶೀಲಿಸುವುದರಿಂದ ನಮಗೆ ಬೇಕಾದ ಪುಸ್ತಕದ ಆಯ್ಕೆ ಸುಲಭವೂ ಉಪಯುಕ್ತವೂ ಆಗುತ್ತದೆ. ಸಾವಿರ ಸಂಖ್ಯೆಯ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ವಿಮರ್ಶೆಗಳನ್ನು ಕಂಡುಕೊಳ್ಳುವ

ಕೆಲಸ ಪುಸ್ತಕವಿಮರ್ಶೆ ಸೂಚಿಗಳ ಸಹಾಯದಿಂದ ಸುಲಭವಾಗು ತ್ತದೆ. ಅಮೆರಿಕೆಯ ವಿಲ್ಸನ್ ಕಂಪನಿ ಪ್ರಕಟಿಸುವ 'ಪುಸ್ತಕ ವಿಮರ್ಶೆ ಸಂಗ್ರಹ' (Book Review Digest) ಇಂಥ ಪ್ರಕಟಣೆ. ನಾನಾ ಪತ್ರಿಕೆಗಳಲ್ಲಿ ವಿಮರ್ಶೆ ಆದ ಪುಸ್ತಕಗಳ ವಿವರ, ವಿಮರ್ಶೆಯ ಆಯ್ದ ಭಾಗಗಳು, ವಿಮರ್ಶೆ ಪ್ರಕಟವಾಗಿರುವ ಮೂಲ ಇವುಗಳನ್ನು ಇದು ಒದಗಿಸುತ್ತದೆ. ಇದನ್ನು ಪುಸ್ತಕ ವಿಮರ್ಶೆ ಸಾರಾಂಶ ಸೂಚಿ ಎನ್ನಬಹುದು. ವಿಮರ್ಶೆಯ ಭಾಗಗಳನ್ನು ಕೊಡದೆ ವಿಮರ್ಶಾಮೂಲವನ್ನು ಮಾತ್ರ ಸೂಚಿಸುವ ಪುಸ್ತಕ ವಿಮರ್ಶಾಸೂಚಿ (Book Review Index) ಸಹ ಪ್ರಕಟವಾಗುತ್ತಿದೆ.

ಜ್ಞಾನದಾಹ ಇರುವ ವಿಧ್ಯಾರ್ಥಿ ತನಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಯಾವ ಪುಸ್ತಕ, ಲೇಖನಸೂಚಿ, ಸಾರಾಂಶ ಸೂಚಿ ಗಳಿವೆ ಎಂಬುದನ್ನು ಮೊದಲು ತಿಳಿಯಬೇಕು. ಸ್ವಂತ ಪರಿಶ್ರಮದಿಂದಲೋ, ವಿಷಯತಜ್ಞ ಅಧ್ಯಾಪಕರ ಮೂಲ ಕವೋ, ಗ್ರಂಥಾಲಯ ವಿಜ್ಞಾನಿಗಳ ಸಹಾಯದಿಂದಲೋ ಇಂಥ ತಿಳಿವನ್ನು ಪಡೆಯಬಹುದು. ಇಂಥ ತಿಳಿವು, ಅನುಭವ ಇಲ್ಲದವನು ಪ್ರಕಾಶನ ಪ್ರಪಂಚದ ಚಕ್ರಕೋಟೆಯಲ್ಲಿ ದಾರಿ ಕಾಣದೆ ತೊಳಲುತ್ತಾನೆ. ಆಧುನಿಕ ಪ್ರಪಂಚದಲ್ಲಿ ವ್ಯಾಸಂಗಕ್ಕೆ ಇಂಥ ತಿಳಿವೇ ನಿಜವಾದ ಗಣಪತಿಪೂಜೆ. ಅದಿಲ್ಲದವನ ವ್ಯಾಸಂಗ ನಿತ್ಯ ವಿಘ್ನಕಾರಿ, ಸದಾ ಅಪೂರ್ಣ.

ಕೆಲವು ಪ್ರಮುಖ ಪುಸ್ತಕ ಲೇಖನ ಸೂಚಿಗಳು

1. ಕನ್ನಡ ಗ್ರಂಥಸೂಚಿ : 1817–1968; 1969–71 ಮೈಸೂರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾ

ನಿಲಯ, 1974.

1817 ರಿಂದ ಪ್ರಕಟವಾಗಿರುವ ಕನ್ನಡ ಪುಸ್ತಕಗಳ ವಿವರಣಾತ್ಮಕ ಸೂಚಿ.

2. Indian National Bibliography
Culcutta : Central Reference Library, 19
ಇಂಗ್ಲೀಷ್ ಹಾಗೂ ರಾಜ್ಯ ಭಾಷೆಗಳಲ್ಲಿ ಪ್ರಕಟವಾಗುವ ಭಾರತೀಯ ಪುಸ್ತಕಗಳ ಸೂಚಿ.

3. National Bibliography of Indian Literature 1901–1953. New Delhi : Sahitya Academy,
1962–1971 4 Vols.
ಭಾರತೀಯ ಸಾಹಿತ್ಯದ ರಾಷ್ಟ್ರೀಯ ಪುಸ್ತಕ ಸೂಚಿ.
1901 ರಿಂದ 1953 ರ ವರೆಗೆ ಭಾರತೀಯ ಭಾಷಾ ಸಾಹಿತ್ಯಗಳಲ್ಲಿ ಪ್ರಕಟವಾದ ಆಯ್ದ ಪುಸ್ತಕಗಳ ಪಟ್ಟಿ.

4. British Museum
General Catalogue of Printed Books
(ಬ್ರಿಟಿಷ್ ಮ್ಯೂಸಿಯಂ ಮುದ್ರಿತ ಪುಸ್ತಕಗಳ ಸೂಚಿ.)
London : Trustees of the British Museum, 1965–1966, 263 Vols.
ಜಗದ್ವಿಖ್ಯಾತ ಬ್ರಿಟಿಷ್ ಮ್ಯೂಸಿಯಂನಲ್ಲಿರುವ ಗ್ರಂಥ ಸಂಪತ್ತಿನ ಸೂಚಿ.

5. Indian Books (ಭಾರತೀಯ ಗ್ರಂಥಗಳು)
Varanasi : Indian Bibliographic Centre 1969.

ಭಾರತದಲ್ಲಿ ಪ್ರಕಟವಾಗುವ ಪುಸ್ತಕಸೂಚಿ. ಪ್ರತಿ ವರ್ಷ 3–4 ಸಾವಿರ ಪುಸ್ತಕಗಳ ವಿವರ ಇರುತ್ತದೆ.

6. Descriptive Catalogue of Sanskrit Manuscripts.

ಸಂಸ್ಕೃತ ಹಸ್ತಪ್ರತಿಗಳ ವರ್ಣನಾತ್ಮಕ ಪುಸ್ತಕಸೂಚಿ.

Madras : Government Oriental Library, Madras Government Press, 1901–1962 35 Vols.

ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ಸಂಸ್ಕೃತ ಹಸ್ತಪ್ರತಿಗಳ ವರ್ಣನಾತ್ಮಕ ಪುಸ್ತಕಸೂಚಿ.

7. Besterman, Teodore. A World Bibliography of Bibliographies, 4th Ed.

(ಪುಸ್ತಕ ಸೂಚಿಗಳ ಪ್ರಪಂಚ ಪುಸ್ತಕ ಸೂಚಿ.)

Geneva : Societies Bibliographica, 1965–1967 5 Vols.

ಪ್ರಪಂಚದ 40 ಭಾಷೆಗಳಲ್ಲಿನ 17 ಸಾವಿರ ಪುಸ್ತಕಸೂಚಿಗಳ ಸೂಚಿ, ಲೇಖನಸೂಚಿ, ವಿಷಯಸೂಚಿ, ಅನುವಾದಸೂಚಿ ಇತ್ಯಾದಿ ಸೂಚಿಗಳನ್ನೊಳಗೊಂಡಿದೆ.

8. Bibliographic Index (ಪುಸ್ತಕ ಸೂಚಿಗಳ ಸೂಚಿ)

New York : H. W. Wilson Co., 1937.

ಪುಸ್ತಕಸೂಚಿಗಳ ಸೂಚಿ.

9. The National Union Catalogue (ರಾಷ್ಟ್ರೀಯ ಸಂಯುಕ್ತ ಪುಸ್ತಕಸೂಚಿ.)
Washington D. C.: Library of Congress, 1956.
ಅಮೆರಿಕ ಹಾಗೂ ಕೆನಡಗಳ 750 ಪ್ರಮುಖ ಪುಸ್ತಕಾಲಯಗಳ ಪುಸ್ತಕ ಸಂಪತ್ತಿನ ಸಂಯುಕ್ತ ಪುಸ್ತಕ ಸೂಚಿ.

10. A Guide to Reference Materials on India
(ಭಾರತ ಕುರಿತ ಆಕರಮೂಲಗಳ ಕೈಪಿಡಿ)
Jaipur : Saraswathi Publications, 1974, 2 Vols.

11. Eugene P. Sheehy
Guide to Reference Books (ಆಕರ ಗ್ರಂಥಗಳ ಕೈಪಿಡಿ)
American Library Association, 9th Ed. Chicago, 1976.
ಪ್ರಪಂಚಾದ್ಯಂತ ಪ್ರಕಟವಾಗಿರುವ 11 ಸಾವಿರ ಆಯ್ದ ಆಕರಗ್ರಂಥಗಳ ವಿವರಣಾ ಸೂಚಿ. ಅಮೆರಿಕ ಗ್ರಂಥಗಳಿಗೆ ಪ್ರಾಶಸ್ತ್ಯ.

12. Walford, Arthur John
Guide to Reference Materials (ಆಕರ ಮೂಲಗಳ ಕೈಪಿಡಿ)
London; Library Association, 1973, 3 Vols.
12 ಸಾವಿರಕ್ಕೂ ಹೆಚ್ಚು ಆಕರಗ್ರಂಥಗಳ ವಿವರಣಾತ್ಮಕ ಸೂಚಿ. ಬ್ರಿಟಿಷ್ ಗ್ರಂಥಗಳಿಗೆ ಪ್ರಾಶಸ್ತ್ಯ.

13. Guide to Indian Periodical Literature (ಭಾರತೀಯ ನಿಯತಕಾಲಿಕ ಸಾಹಿತ್ಯ ಸೂಚಿ)
Gurgaon: Indian Documentation Service, 1964
ಲಲಿತಕಲೆ, ಸಾಹಿತ್ಯ, ಸಮಾಜಶಾಸ್ತ್ರಗಳಿಗೆ ಸಂಬಂಧಿಸಿದ 300 ಭಾರತೀಯ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ಲೇಖನಗಳ ಸೂಚಿ. ಟೈಂಸ್ ಆಫ್ ಇಂಡಿಯ ಪತ್ರಿಕಾ ಲೇಖನಗಳನ್ನು ಒಳಗೊಂಡಿದೆ.

14 Index India (ಭಾರತ ಸೂಚಿ)
Jaipur: Rajastan University, 1967
ಪ್ರತಿವರ್ಷ ಸಾವಿರಕ್ಕೂ ಹೆಚ್ಚಿನ ನಿಯತಕಾಲಿಕಗಳು, 150 ಸಂಕಲನ ಗ್ರಂಥಗಳಲ್ಲಿ ಪ್ರಕಟವಾಗುವ ಭಾರತಕ್ಕೆ ಸಂಬಂಧಪಟ್ಟ ಇಂಗ್ಲಿಷ್ ಲೇಖನಗಳ ಸೂಚಿ.

15. Index to Indian Medical Periodicals 1953

ಭಾರತೀಯ ವೈದ್ಯಶಾಸ್ತ್ರ ನಿಯತಕಾಲಿಕಗಳ ಲೇಖನ ಸೂಚಿ.

16. Granger's Index to Poetry (ಗ್ರ್ಯಾಂಗರನ ಕಾವ್ಯಸೂಚಿ)

6th Ed. New York : Columbia University Press 1973.

ಇಂಗ್ಲಿಷ್ ಕಾವ್ಯ ಸಂಗ್ರಹಗಳ ಕವನಸೂಚಿ. ಕವನದ ಹೆಸರು, ಮೊದಲ ಸಾಲು ತಿಳಿದಿದ್ದರೆ ಕವನದ ವಿವರ ಗಳನ್ನು ತಿಳಿಯಲು ಸಹಾಯಮಾಡುತ್ತದೆ.

17. Short Story Index (ಸಣ್ಣ ಕತೆಗಳ ಸೂಚಿ) New York : Wilson Co., 1953

ನೂರಾರು ಕಥಾ ಸಂಕಲನಗಳಲ್ಲಿರುವ ಕಥೆಗಳಸೂಚಿ. ಇಂಗ್ಲಿಷ್ ಭಾಷೆಯ ಕಥಾ ಸಂಕಲನಗಳಿಗೆ ಮಿತಿ ಗೊಂಡದ್ದು.

18. Press in India (ಭಾರತದ ಪತ್ರಿಕೆಗಳು) New Delhi : Ministry of Information and Broadcasting Annual.

ಭಾರತೀಯ ಪತ್ರಿಕೆ, ನಿಯತಕಾಲಿಕಗಳ ಸೂಚಿ.

19. Cumulative Book Index (ಸಂಯೋಜಿತ ಪುಸ್ತಕಸೂಚಿ)

New York : Wilson Co., 1898

ಪ್ರಪಂಚಾದ್ಯಂತ ಪ್ರಕಟವಾಗುವ ಇಂಗ್ಲಿಷ್ ಭಾಷಾ ಗ್ರಂಥಗಳ ಸೂಚಿ.

20. Historical Abstracts (ಚರಿತ್ರೆ ಲೇಖನ ಸಾರಾಂಶ ಸೂಚಿ)

Santa Barbara, Calif : American Bibliographic Center, 1955

ಪ್ರಪಂಚಾದ್ಯಂತ ಪ್ರಕಟವಾಗುವ ನಿಯತಕಾಲಿಕ ಚಾರಿತ್ರಿಕ ಲೇಖನಗಳ ಸಾರಾಂಶ ಸೂಚಿ.

ಹೆಚ್ಚು ವಿಚಾರ ತಿಳಿಯಲು ಸಹಾಯಕವಾದ ಪುಸ್ತಕ ಲೇಖನ ಸೂಚಿ

'Abstracting Services', Library Trends Jan. 1968

Bernier, Charles L. 'Abstracts and Abstracting', Encyclopaedia of Library and Information Sciences. Vol. I, 16-38. New York : Dekker, 1968.

Collison, R. L. Bibliographies Subject and National, 3rd Ed. London : Crosby Lockwood & Son, 1968.

Hale, Barbara W. The Subject Bibliography of the Social Sciences

and Humanities. New York : Pergamon Press, 1970.

Perreault, J. M. ''Reflections on the Idea of a Universal Bibliography;'' Herald of Library Science, July 1971. PP. 214

Stokes, Roy B. ''Bibliography'' Encyclopaedia of Library and Information Science, Vol. 2. 407-419. New-York : Dekker, 1969

ವಿಶ್ವಕೋಶಗಳು

ಹೆಸರೇ ಸೂಚಿಸುವಂತೆ ವಿಶ್ವಕೋಶಗಳು ಜ್ಞಾನ ಪ್ರಪಂಚದ ಎಲ್ಲ ವಿಚಾರಗಳನ್ನೂ ಒಳಗೊಂಡಿದ್ದು ಬಹು ಜನರ ಅನುದಿನದ ಅವಶ್ಯಕತೆಗಳನ್ನು ಪೂರೈಸುತ್ತವೆ. ಯಾರು. ಏನು. ಯಾವಾಗ ಮತ್ತು ಹೇಗೆ, ಎಲ್ಲಿ ಎಂಬ ಪ್ರಶ್ನೆಗಳಿಗೆ ಸರಳವಾದ ಉತ್ತರ ಒದಗಿಸುತ್ತವೆ. ಯಾವುದೇ ವಿಷಯ ಕುರಿತ ಸಮಗ್ರ ಚಿತ್ರ, ಒಂದು ಸ್ಥಳದ ವಿವರಣೆ. ಜೀವನದ ಯಾವುದೇ ರಂಗದಲ್ಲಿ ಸಾಕಷ್ಟು ಖ್ಯಾತಿ ಪಡೆದವರ ವ್ಯಕ್ತಿ ಪರಿಚಯಗಳನ್ನು ಸುಲಭ ಶೈಲಿಯಲ್ಲಿ ಆಕರ್ಷಕವಾಗಿ ಮಾಡಿ ಕೊಡುವ ವಿಶ್ವಕೋಶ ವಿಷಯಗಳನ್ನು ತಿಳಿಯಲೂ. ಓದಿನ ಸಂತೋಷಾನುಭವ ಪಡೆಯಲೂ. ಪಂಡಿತ ಪಾಮರರೆಲ್ಲರಿಗೂ ಒಳ್ಳೆಯ ಸಾಧನ. ನಮಗೆ ತಿಳಿಯದ ಯಾವುದೇ ವಿಷಯ ವನ್ನು ತಿಳಿಯಲು ವಿಶ್ವಜ್ಞಾನದ ಪಕ್ಷಿನೋಟ ಒದಗಿಸುವ ವಿಶ್ವಕೋಶ ಫಲಕಾರಿ ಪ್ರಥಮ ಹೆಜ್ಜೆ. ಅನೇಕ ಜಿಸ್ನಲಿ ವಿಚಾರಗಳನ್ನು ವಿಶ್ವಕೋಶ ಕ್ಲಿಷ್ಟವಲ್ಲದ ರೀತಿಯಲ್ಲಿ ವಿವರಿಸು ತ್ತದೆ. ಶತಮಾನಗಳ ಹಿಂದೆ ವಿಶ್ವಕೋಶ ಪಂಡಿತರಿಂದ ಪಂಡಿತರಿಗಾಗಿಯೇ ಬರೆಯಲ್ಪಟ್ಟ ಲೇಖನಗಳ ಸಂಕಲನ ಮಾತ್ರ ಆಗಿತ್ತಾದರೂ. ಸಾರ್ವತ್ರಿಕ ವಿದ್ಯಾಭ್ಯಾಸದ ಹರಡು ವಿಕೆಯೊಡನೆ ವಿಶ್ವಕೋಶಗಳ ದೃಷ್ಟಿಯೂ ಬದಲಾಗಿ ಇಂದು ಪಂಡಿತ ಪಾಮರರೆಲ್ಲರ ಉಪಯೋಗವೇ ಅವುಗಳ ಘೋಷಿತ ಧ್ಯೇಯವಾಗಿದೆ.

ವಿವಿಧ ವಿಶ್ವಕೋಶಗಳು

ವಿಶ್ವಕೋಶಗಳಲ್ಲಿ ಹಲವು ವಿಧಗಳುಂಟು. ಕೆಲವು ವಯಸ್ಕರ ಉಪಯೋಗಕ್ಕಾಗಿದ್ದರೆ ಮತ್ತೆ ಕೆಲವು ಕಿರಿಯರ ಹಾಗೂ ಶಾಲಾ ವಿಧ್ಯಾರ್ಥಿಗಳ ಉಪಯೋಗಕ್ಕೆಂದು ಸಿದ್ಧವಾದವು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶ ಹಾಗೂ ಬ್ರಿಟಾನಿಕ ವಿಶ್ವಕೋಶ (Encyclopaedia Britannica) ವಯಸ್ಕರ ವಿಶ್ವಕೋಶಗಳು. ಜ್ಞಾನ ಗಂಗೋತ್ರಿ ಮತ್ತು ಬ್ರಿಟಾನಿಕ (Britannica Junior Encyclopaedia) ಕಿರಿಯರ ವಿಶ್ವಕೋಶಗಳು. ಕಿರಿಯರ ವಿಶ್ವಕೋಶಗಳು ಸರಳ ಶೈಲಿ, ಭಾಷೆ ಉಪಯೋಗಿಸುವುದರ ಜೊತೆಗೆ ಕಿರಿಯರ ಆಸಕ್ತಿ ಕುತೂಹಲಗಳನ್ನು ಅರಸಲೆಂದೇ ಅನೇಕ ಚಿತ್ರಗಳನ್ನು ಹೊಂದಿದ್ದು ಅಂದವಾದ ಮುದ್ರಣಕ್ಕೆ ಹೆಚ್ಚು ಗಮನ ಕೊಡುತ್ತವೆ.

ಕೆಲವು ವಿಶ್ವಕೋಶಗಳು ವಿಶ್ವಜ್ಞಾನದ ಎಲ್ಲ ಮುಖಗಳನ್ನೂ ಪ್ರತಿನಿಧಿಸುವ ಗುರಿ ಇಟ್ಟುಕೊಂಡಿರುತ್ತವೆ. ಬ್ರಿಟಾನಿಕ ವಿಶ್ವಕೋಶದ ಸ್ವವಿವರಣೆ, 'ವಿಶ್ವಜ್ಞಾನದ ಹೊಸ ಪಕ್ಷಿನೋಟ' (A New Survey of Universal Knowledge). ಹಲವು ವಿಶ್ವಕೋಶಗಳು ಇಂಥ ಪ್ರಯತ್ನ ಮಾಡದೆ ಯಾವುದಾದರೊಂದು ವಿಷಯದ ಎಲ್ಲ ಮುಖಗಳ ಸಮಗ್ರ ಪರಿಚಯಮಾಡಿಕೊಡಲೆತ್ನಿಸುತ್ತವೆ. ಮೆಗ್ರಾಹಿಲ್ ಕಂಪನಿಯ 'ವಿಜ್ಞಾನ ಹಾಗೂ ತಾಂತ್ರಿಕಜ್ಞಾನ ವಿಶ್ವಕೋಶ' (McGraw Hill Encyclopaedia of Science and Technology) ಹಾಗೂ 'ತತ್ವಶಾಸ್ತ್ರ ವಿಶ್ವಕೋಶ'

(Encyclopaedia of Philosophy) ಇಂಥ ವಿಶ್ವ ಕೋಶಗಳು. ಸಹಜವಾಗಿಯೇ ಇವು ತಾವು ಆರಿಸಿಕೊಂಡ ವಿಷಯದ ಸಂಪೂರ್ಣ, ಸುದೀರ್ಘ ವಿವರ ಕೊಡುತ್ತವೆ. ಇವುಗಳ ಲೇಖನಗಳು ಹೆಚ್ಚು ಪಾಂಡಿತ್ಯಪೂರ್ಣವಾಗಿದ್ದು ಅವನ್ನು ಅರ್ಥಮಾಡಿಕೊಳ್ಳಲು ಅನೇಕ ವೇಳೆ ಆ ವಿಷಯದ ಪೂರ್ವ ಪರಿಚಯ ಅಗತ್ಯ.

ವಿಶ್ವಕೋಶಗಳ ಲಕ್ಷಣಗಳು

ವಿಶ್ವಜ್ಞಾನವನ್ನೇ ವಸ್ತುವಾಗುಳ್ಳ ವಿಶ್ವಕೋಶಗಳು ವಿಷಯ ವ್ಯಾಪ್ತಿಯಿಂದ ಸಹಜವಾಗಿಯೇ ಬೃಹದ್‌ಗ್ರಂಥಗಳಾಗಿದ್ದು ಒಂದಕ್ಕಿಂತ ಹೆಚ್ಚು ಸಂಪುಟಗಳಿರುತ್ತವೆ. ಬ್ರಿಟಾನಿಕ ವಿಶ್ವಕೋಶದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚಿನ ಲೇಖನಗಳಿದ್ದು ಅದು ಇಪ್ಪತ್ತನಾಲ್ಕು ಸಂಪುಟಗಳಲ್ಲಿದೆ. ಶತಮಾನಗಳ ಹಿಂದೆ ವಿಶ್ವಕೋಶಗಳು ಒಬ್ಬನೇ ಲೇಖಕನ ಶ್ರಮದ ಫಲವಾಗಿದ್ದು ಅವನ ಇಷ್ಟಾನಿಷ್ಟಗಳ ಪ್ರತಿಬಿಂಬ ಆಗಿರುತ್ತಿದ್ದವು. ಇಂದು ವಿಶ್ವಕೋಶಗಳು ಪ್ರಪಂಚಾದ್ಯಂತ ಇರುವ ನೂರಾರು ಹಲವು ವೇಳೆ ಸಾವಿರಾರು ಮಂದಿ ಪರಿಣತರ ಸಂಯುಕ್ತ ಪರಿಶ್ರಮದ ಫಲ ಆಗಿವೆ. ಹತ್ತು ಸಾವಿರಕ್ಕೂ ಮೀರಿದ ಸಂಖ್ಯೆಯ ವಿಶ್ವ ಲೇಖಕರು ಬರೆದ ಲೇಖನಗಳು ಬ್ರಿಟಾನಿಕ ವಿಶ್ವಕೋಶದಲ್ಲಿವೆ. ಒಂದೇ ಸಂಪುಟ ಇರುವ ವಿಶ್ವಕೋಶ ಅಪರೂಪ, ಆದರೂ ಇಲ್ಲದೆ ಇಲ್ಲ. 'ಕೊಲಂಬಿಯ ವಿಶ್ವಕೋಶ' (Columbia Encyclopaedia) ಇಂಥ ಒಂದು ಉದಾಹರಣೆ.

ಕೆಲವು ವಿಶ್ವಕೋಶಗಳು ಬ್ರಿಟಾನಿಕದಂತೆ ಸುದೀರ್ಘ ಲೇಖನಗಳಿಗೆ ಹೆಸರಾಗಿದ್ದರೆ ಮತ್ತೆ ಕೆಲವು 'ಅಮೆರಿಕಾದ ವಿಶ್ವ

ಕೋಶ (Encyclopaedia Americana) ದಂತೆ ಬಹು ಸಂಖ್ಯಾತ ಲಘು ಲೇಖನಗಳಿಗೆ ಹೆಸರಾಗಿವೆ. ವಿಶ್ವಕೋಶದ ಲೇಖನಗಳು ಅಕಾರಾದಿ ಅಕ್ಷರ ಮಾಲೆಗನುಗುಣವಾಗಿ ಶಬ್ದಕೋಶದ ರೀತಿಯಲ್ಲಿ ವ್ಯವಸ್ಥಿತವಾಗಿರುತ್ತವೆ. ಅಷ್ಟೇ ಅಲ್ಲದೆ ಅವುಗಳ ಉಪಯೋಗ ಸುಲಭವಾಗಲೆಂಬ ಉದ್ದೇಶದಿಂದ ಬೃಹತ್ ವಿಶ್ವಕೋಶಗಳು ಲೇಖನ ವಿಷಯಗಳ ಸೂಚಿಯನ್ನು ಕೊನೆಯ ಸಂಪುಟದಲ್ಲಿ ಕೊಡುತ್ತವೆ. ಅದರ ಸಹಾಯದಿಂದ ನಮಗೆ ಬೇಕಾದ ವಿಷಯ ಯಾವ ಸಂಪುಟದಲ್ಲಿದೆ, ಎಷ್ಟನೆ ಪುಟದಲ್ಲಿದೆ, ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಇಂದಿನ ಹಾಗೂ ಗತಕಾಲದ ಘಟನೆಗಳೆಲ್ಲದರ ವಿವರಣೆ ಉಳ್ಳ ವಿಶ್ವಕೋಶಗಳು ಸಾಮಾನ್ಯವಾಗಿ ಸಚಿತ್ರ ಲೇಖನಗಳನ್ನು ಹೊಂದಿದ್ದು ಆಕರ್ಷಕ ಮುದ್ರಣಕ್ಕೆ ಹೆಸರಾಗಿವೆ.

ಪ್ರಪಂಚದ ನಾನಾ ಭಾಗಗಳ ಭೂಪಟಗಳಿರುವುದು ವಿಶ್ವಕೋಶಗಳ ಇನ್ನೊಂದು ಲಕ್ಷಣ. ಬ್ರಿಟಾನಿಕದ ಕೊನೆಯ ಸಂಪುಟ, ಲೇಖನ ವಿಷಯಸೂಚಿಗಳಿಗೂ, ಭೂಪಟಗಳಿಗೂ ಮೀಸಲಾಗಿದೆ. ಹೆಸರಾಂತ ವಿಶ್ವಕೋಶಗಳು ಪ್ರತಿ ಲೇಖನದ ಕೊನೆಯಲ್ಲಿ ಬರೆದವರ ಹೆಸರನ್ನು ಪ್ರಕಟಿಸುತ್ತವೆ. ಲೇಖಕನ ಹೆಸರಿನಿಂದ ಲೇಖನ ಎಷ್ಟು ಮಟ್ಟಿಗೆ ಅಧಿಕಾರಯುತ, ಪಾಂಡಿತ್ಯಪೂರ್ಣ, ನಂಬಿಕೆಗೆ ಅರ್ಹ ಎಂಬುದನ್ನು ವಾಚಕರು ನಿರ್ಧರಿಸಬಹುದು. ಲೇಖನಗಳ ಕೊನೆಯಲ್ಲಿ ಆಧಾರಗ್ರಂಥ, ಲೇಖನಗಳ ಸೂಚಿ ಇರುವುದು ಖ್ಯಾತ ವಿಶ್ವಕೋಶಗಳ ಇನ್ನೊಂದು ಲಕ್ಷಣ. ಆಧಾರ ಗ್ರಂಥ, ಲೇಖನಗಳು ಪ್ರಕಟವಾದ ಕಾಲವನ್ನು ನೋಡಿ ಲೇಖನ ಸಾಕಷ್ಟು ಸಮಕಾಲೀನ ವಿಚಾರಗ

ಳನ್ನು ಪ್ರತಿನಿಧಿಸುವುದೇ ಇಲ್ಲವೇ ಎಂಬುದನ್ನು ಬುದ್ಧಿವಂತ ವಾಚಕ ನಿರ್ಧರಿಸಬಹುದು.

ವಿಶ್ವಕೋಶಗಳು ನಿತ್ಯನೂತನ

ಪ್ರಪಂಚದ ಜ್ಞಾನ ನಿಂತ ನೀರಲ್ಲ: ಹರಿಯುವ ನೀರಿನಂತೆ ಸದಾ ಬದಲಾಗುತ್ತ ಬೆಳೆಯುತ್ತಿರುತ್ತದೆ. ಇಂದಿನ ಸತ್ಯ ನಾಳೆಯ ಮಿಥ್ಯ ಆಗಬಹುದು. ಇಂದು ನಮಗೆ ತಿಳಿಯದ ವಿಚಾರವೊಂದು ನಾಳೆ ಬರಬಹುದು. ಹೊಸ ಹೊಸ ವಿಚಾರಗಳು ಜ್ಞಾನ ಪ್ರಪಂಚದಲ್ಲಿ ಹುಟ್ಟುತ್ತಲೇ ಇರುತ್ತವೆ. ವಿಶ್ವಜ್ಞಾನದ ಕೈಗನ್ನಡಿಗಳಾಗುವ ಹಂಬಲವುಳ್ಳ ವಿಶ್ವಕೋಶಗಳು ಸದಾ ಬದಲಾಗುತ್ತಿರುವ ಜ್ಞಾನಲೋಕ ಪ್ರತಿಬಿಂಬಿಸಲು ಹೊಸ ಹೊಸ ಮುದ್ರಣಗಳನ್ನು ಹೊರತರಬೇಕಾಗುತ್ತದೆ. ವಿಷಯಗಳನ್ನೂ, ಲೇಖನಗಳನ್ನೂ, ಅನೇಕ ಅಂಕಿಅಂಶಗಳನ್ನೂ ಹೊಸ ತಿಳಿವಿನ ಬೆಳಕಿನಲ್ಲಿ ಪರಿಷ್ಕರಿಸುತ್ತಲೇ ಇರಬೇಕಾಗುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಮೂರು ಸಂಪುಟ ಇದ್ದ ಬ್ರಿಟಾನಿಕ ಇಂದು ಇಪ್ಪತ್ನಾಲ್ಕು ಸಂಪುಟ ಇರುವುದನ್ನು ಗಮನಿಸಿದಾಗ ಜ್ಞಾನ ಪ್ರಪಂಚ ಹೇಗೆ ಬೆಳೆಯುತ್ತಿದೆ ಎಂಬುದನ್ನು ಊಹಿಸಬಹುದು.

ವಿಶ್ವಕೋಶಗಳ ಪರಿಷ್ಕಾರಕಾರ್ಯ ಕಷ್ಟಕರವೂ ಹೌದು; ಅಪಾರ ವೆಚ್ಚದ್ದೂ ಹೌದು. ಪ್ರಮುಖ ವಿಶ್ವಕೋಶಗಳು ಶಾಶ್ವತ ಸಂಪಾದಕ ಮಂಡಳಿಗಳನ್ನೂ ಕಛೇರಿಗಳನ್ನೂ ಹೊಂದಿರುತ್ತವೆ. ಪ್ರತಿವರ್ಷ ಪುರವಣಿಗಳನ್ನು ಹೊರತರುವುದರ ಮೂಲಕ ವಿಶ್ವಕೋಶಗಳು ಆಯಾ ವರ್ಷದ ಪ್ರಮುಖ ಆಗುಹೋಗುಗಳನ್ನೂ, ಜ್ಞಾನಲೋಕದ ಬೆಳವಣಿಗೆಗಳನ್ನೂ

ಓದುಗರ ಗಮನಕ್ಕೆ ತರುತ್ತವೆ. ಹತ್ತಾರು ವರ್ಷಗಳಿಗೊಮ್ಮೆ ವಾರ್ಷಿಕ ಬದಲಾವಣೆಗಳನ್ನೆಲ್ಲ ಕ್ರೋಢೀಕರಿಸಿ. ಸೂಕ್ತ ತಿದ್ದುಪಡಿಗಳನ್ನು ಮಾಡಿ, ಹೊಸ ಲೇಖನಗಳನ್ನು ಅವಶ್ಯಕತೆಗಳನುಗುಣವಾಗಿ ಸೇರಿಸಿದ ಹೊಸ ಅವತರಣಿಕೆ ಪ್ರಕಟವಾಗುತ್ತದೆ. ಹೀಗೆ ವಿಶ್ವಕೋಶಗಳು ನಿತ್ಯನೂತನವಾಗಿರುವ ನಿರಂತರ ಸಾಹಸ ಮಾಡುತ್ತಲೇ ಇರುತ್ತವೆ.

ವಿಶ್ವಕೋಶಗಳ ಉಪಯೋಗದಲ್ಲಿ ವಿವೇಚನೆ

ವಿಶ್ವಕೋಶಗಳ ಸಾರ್ಥಕ ಉಪಯೋಗ ಪಡೆಯಲು ಅವುಗಳ ಇತಿಮಿತಿ ತಿಳಿಯುವ ಅವಶ್ಯಕತೆ ಇದೆ. ಪೂರ್ವಗ್ರಹ ಪೀಡಿತವಾಗದೆ ವಿಚಾರಗಳನ್ನು ತಿಳಿಸುವುದು ಒಳ್ಳೆಯ ವಿಶ್ವಕೋಶದ ಗುರಿ. ಆದರೂ, ಅನೇಕ ವಿಶ್ವಕೋಶಗಳು ತಾವು ಜನ್ಮತಾಳುವ ರಾಷ್ಟ್ರಗಳ ಪೂರ್ವಗ್ರಹ ಪೀಡಿತ ಅಭಿಪ್ರಾಯಗಳನ್ನೋ, ರಾಷ್ಟ್ರೀಯ ದೃಷ್ಟಿಯನ್ನೋ ಪ್ರತಿಬಿಂಬಿಸುತ್ತಿದ್ದು ಕೆಲವು ವೇಳೆ ಅವುಗಳ ಸಮದೃಷ್ಟಿಗೆ ಧಕ್ಕೆ ಬಂದಿರುವುದುಂಟು. ಬ್ರಿಟಾನಿಕ ಸಹಜವಾಗಿಯೇ ಬ್ರಿಟಿಷ್ ಹಾಗೂ ಅಮೆರಿಕ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರೆ, ಅಮೆರಿಕಾನ ಅಮೆರಿಕ ವಿಷಯಗಳಿಗೂ, ಕನ್ನಡ ವಿಶ್ವಕೋಶ ಕನ್ನಡ ನಾಡು; ನುಡಿ. ಜನಜೀವನಗಳಿಗೂ ಹೆಚ್ಚಿನ ಗಮನ ಕೊಡುತ್ತವೆ. ಕನ್ನಡ ಚಲನಚಿತ್ರೋದ್ಯಮ ಕುರಿತ ಲೇಖನವನ್ನು ಬ್ರಿಟಾನಿಕದಲ್ಲಿ ಹುಡುಕಹೋಗುವುದು ನಿರರ್ಥಕವೇ ಸರಿ. ಸೋವಿಯೆಟ್ ವಿಶ್ವಕೋಶ ಜ್ಞಾನಲೋಕದ ಎಲ್ಲ ವಿಚಾರಗಳನ್ನೂ ಕಮ್ಯುನಿಸ್ಟ್ ದೃಷ್ಟಿಯಿಂದ ಪ್ರತಿಪಾದಿಸುತ್ತದೆ. ಪಶ್ಚಿಮ ರಾಷ್ಟ್ರಗಳಲ್ಲಿ ಪ್ರಕಟವಾಗುವ ವಿಶ್ವಕೋಶಗಳು

ಪೌರ್ವಾತ್ಯ ರಾಷ್ಟ್ರ ವಿಚಾರಗಳಿಗೆ ಸಾಕಷ್ಟು ಗಮನ ಕೊಡುವುದಿಲ್ಲ. ಕ್ಯಾಥೊಲಿಕ್ ವಿಶ್ವಕೋಶ (Catholic Encyclopaedia) ರೋಮ್ಸ್ ಕ್ಯಾಥೊಲಿಕ್ ವಿಚಾರಗಳಿಗೆ ಪ್ರಾಧಾನ್ಯ ಕೊಡುತ್ತದೆ. ವಿಶ್ವಕೋಶಗಳ ಮುನ್ನುಡಿಗಳನ್ನು ಓದಿ, ಪರಿಶೀಲಿಸಿ ಅವುಗಳ ಇತಿಮಿತಿಗಳನ್ನು ಕಂಡುಕೊಂಡು ನಮ್ಮ ಅವಶ್ಯಕತೆಗನುಗುಣವಾಗಿ ಅವನ್ನು ಉಪಯೋಗಿಸಬೇಕಾಗುತ್ತದೆ.

ವಿಷಯವೊಂದನ್ನು ತಿಳಿಯುವ ನಮ್ಮ ಪ್ರಯತ್ನದಲ್ಲಿ ವಿಶ್ವಕೋಶ ಮೊದಲ ಮೆಟ್ಟಿಲಾಗಬೇಕೇ ಹೊರತು ಏಕೈಕ ಸಾಧನ ಆಗಬಾರದು. ವಿಶ್ವಕೋಶಗಳ ಲೇಖನಗಳಲ್ಲಿ ದೋಷಗಳಿರುವ ಸಂಭವ ಇದ್ದು ಅವು 'ಇಂದಿನ' ಬೆಳವಣಿಗೆಗಳನ್ನು ಸಾಕಷ್ಟು ಪ್ರತಿಬಿಂಬಿಸದೆ ಇರಬಹುದು. ವಿಶ್ವಕೋಶ ಲೇಖನಗಳ ಪ್ರಮುಖ ಅಂಶಗಳನ್ನು ಬೇರೊಂದು ವಿಷಯ ಮೂಲ ನೋಡಿ ಖಚಿತ ಪಡಿಸಿಕೊಳ್ಳದೆ, ಶೋಧಿಸದೆ ಸ್ವೀಕರಿಸಬಾರದು. ಲೇಖನಗಳ ಕೊನೆಯಲ್ಲಿರುವ ಆಧಾರ ಗ್ರಂಥ, ಲೇಖನಗಳ ಜಾಡು ಹಿಡಿದು ವಿಚಾರವಂತ ಓದುಗರು ತಮ್ಮ ವಿಚಾರ ಸಂಗ್ರಹಣೆ, ವ್ಯಾಸಂಗ, ಸತ್ಯಾನ್ವೇಷಣೆಗಳನ್ನು ಮುಂದುವರೆಸಬಹುದು.

ಪ್ರಪಂಚದ ಅನೇಕ ದೇಶಗಳು ತಮ್ಮ ಭಾಷೆಗಳಲ್ಲಿ ವಿಶ್ವಕೋಶಗಳನ್ನು ಪ್ರಕಟಿಸುತ್ತಿದ್ದು ಅವು ನಾಗರಿಕ ರಾಷ್ಟ್ರಗಳ ಅಭ್ಯುದಯ ಸಂಕೇತಗಳಾಗಿವೆ. ವಿಶ್ವಕೋಶ ಓದು ಬರಹ ಬಲ್ಲವರು ತಿಳಿದಿರಲೇಬೇಕಾದ ಜ್ಞಾನಭಂಡಾರದ ಬೀಗದ ಕೈ.

ಕೆಲವು ಪ್ರಮುಖ ವಿಶ್ವಕೋಶಗಳು

1. **ಕನ್ನಡ ವಿಶ್ವಕೋಶ**

ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. 1969– ಸಂ. ೧-

ಕನ್ನಡನಾಡು, ನುಡಿ, ಚರಿತ್ರೆ, ಜನಜೀವನಗಳಿಗೆ ಉತ್ತಮ ವಿಚಾರ ಮೂಲ. ಕನ್ನಡ ಮಾತ್ರ ಬಲ್ಲವರ ಪಾಲಿಗೆ ವಿಶ್ವಜ್ಞಾನದ ಕೈದೀವಿಗೆ.

2. Encyclopaedia Britannica (ಬ್ರಿಟಾನಿಕ ವಿಶ್ವಕೋಶ). Chicago : Encyclopaedia Britannica Inc., 24 Vols.

1768 ರಲ್ಲಿ ಮೊದಲ ಬಾರಿ ಪ್ರಕಟವಾದ ಬ್ರಿಟಾನಿಕ ಪ್ರಪಂಚ ಖ್ಯಾತಿ ಪಡೆದ ಪ್ರೌಢರ ವಿಶ್ವಕೋಶ. ಸುದೀರ್ಘ ಲೇಖನಗಳಿಗೆ ಹೆಸರಾದದ್ದು.

3. Encyclopaedia Americana. (ಅಮೇರಿಕಾನ ವಿಶ್ವಕೋಶ) New york : Grolier Inc. 30 Vols.

1829 ರಲ್ಲಿ ಪ್ರಥಮವಾಗಿ ಪ್ರಕಟವಾದ ಅಮೇರಿಕಾನ ಸಂಕ್ಷಿಪ್ತ ಲೇಖನಗಳಿಗೆ ಹೆಸರಾಗಿದ್ದು ವಿಜ್ಞಾನ, ಉದ್ಯಮಗಳಿಗೆ ಪ್ರಾಶಸ್ತ್ಯ ಕೊಡುವುದಲ್ಲದೆ ಅಮೇರಿಕ ಜನ, ಜೀವನ, ಸಾಹಿತ್ಯಗಳಿಗೆ ಉತ್ತಮ ವಿಚಾರ ಮೂಲ.

4. **ಜ್ಞಾನ ಗಂಗೋತ್ರಿ**

ಬೆಂಗಳೂರು : ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, 1970 ಏಳು ಸಂಪುಟಗಳಲ್ಲಿರುವ ಕನ್ನಡದ ಕಿರಿಯರ ವಿಶ್ವಕೋಶ.

5. **ಬಾಲ ಪ್ರಪಂಚ**

ಬೆಂಗಳೂರು: ಸತ್ಯಶೋಧನ ಪ್ರಕಟಣ ಮಂದಿರ, 1939

ಡಾ. ಶಿವರಾಮ ಕಾರಂತರ ಮೂರು ಸಂಪುಟಗಳ ಕಿರಿಯರ ವಿಶ್ವಕೋಶ.

6. World Book Encyclopaedia. (ಪ್ರಪಂಚ ಪುಸ್ತಕ ವಿಶ್ವಕೋಶ). Chicago : Filed Enterprise Educational Corporation. 22 Vols.

ಕಿರಿಯರ ಒಂದು ಉತ್ತಮ ವಿಶ್ವಕೋಶ.

7. The Columbia Encyclopaedia. (ಕೊಲಂಬಿಯ ವಿಶ್ವಕೋಶ). New york : Columbia University Press, 1963

ಕೊಲಂಬಿಯ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಒಂದು ಸಂಪುಟದ ವಿಶ್ವಕೋಶ.

8. Encyclopaedia of World Art (ಪ್ರಪಂಚ ಕಲಾ ವಿಶ್ವಕೋಶ) New york: McGraw-Hill Book Co., 1959–1968

ಪ್ರಪಂಚದ ಲಲಿತ ಕಲೆಗಳಿಗೆ ಮೀಸಲಾದ ವರ್ಣಮಯ ಚಿತ್ರಗಳಿಂದ ಕೂಡಿದ ಹದಿನೈದು ಸಂಪುಟಗಳ ಖ್ಯಾತ ವಿಶ್ವಕೋಶ.

9. Encyclopaedia of Education (ಶಿಕ್ಷಣ ವಿಶ್ವ ಕೋಶ) New york : Free Press, 1971. 10 Vols.

ಶಿಕ್ಷಣ ತತ್ತ್ವ. ಚರಿತ್ರೆಗಳಿಗೆ ಸಂಬಂಧಿಸಿದ ಸಾವಿರಕ್ಕೂ ಹೆಚ್ಚಿನ ಪರಿಣತರ ಲೇಖನಗಳನ್ನುಳ್ಳ ವಿಶ್ವಕೋಶ.

10. The New Cambridge Modern History (ನೂತನ ಕೇಂಬ್ರಿಡ್ಜ್ ಆಧುನಿಕ ಚರಿತ್ರೆ). New-york : Cambridge University Press, 1957-1970. 3 Vols

ಆಧುನಿಕ ಚರಿತ್ರೆಗೆ ಮೀಸಲಾದ ವಿಶ್ವಕೋಶ.

11. Encyclopaedia of Philosophy (ತತ್ತ್ವ ಶಾಸ್ತ್ರ ವಿಶ್ವಕೋಶ). New york : Cro well Collier and Macmillan, Inc., 1967 8 Vols.

500 ಮಂದಿ ಪಂಡಿತರು ಬರೆದಿರುವ 1400 ಕ್ಕೂ ಹೆಚ್ಚಿನ ಲೇಖನಗಳನ್ನುಳ್ಳ ತತ್ತ್ವಶಾಸ್ತ್ರ ವಿಚಾರಗಳ ವಿಶ್ವಕೋಶ.

12. McGraw-Hill Encyclopaedia of Science and Technology. (ಮೆಗ್ರಾಹಿಲ್

ವಿಜ್ಞಾನ ಹಾಗೂ ತಾಂತ್ರಿಕ ವಿಚಾರ ವಿಶ್ವಕೋಶ). New york : McGraw-Hill Book Co., 1971. 15 Vols.

ಏಳು ಸಾವಿರಕ್ಕೂ ಹೆಚ್ಚಿನ ಸುದೀರ್ಘ ಲೇಖನಗಳನ್ನುಳ್ಳ ಪ್ರಖ್ಯಾತ ವಿಶ್ವಕೋಶ.

13. International Encyclopaedia of the Social Sciences (ಸಮಾಜ ಶಾಸ್ತ್ರಗಳ ಅಂತರ ರಾಷ್ಟ್ರೀಯ ವಿಶ್ವಕೋಶ). New york : Crowell Collier and Macmillan Inc., 1968. 17 Vols.

30 ದೇಶಗಳ 1500 ಮಂದಿ ಪರಿಣತರ ಲೇಖನಗಳನ್ನೂ, 600 ಮಂದಿ ಸಮಾಜಶಾಸ್ತ್ರ ಪ್ರಮುಖರ ವ್ಯಕ್ತಿಪರಿಚಯಗಳನ್ನೂ ಒಳಗೊಂಡ ವಿಶ್ವಕೋಶ.

14. Cassell's Encyclopaedia of Literature (ಕ್ಯಾಸಲ್ ಪ್ರಪಂಚ ಸಾಹಿತ್ಯ ವಿಶ್ವಕೋಶ). London Cassell, 1953. 2 Vols.

ಪ್ರಪಂಚದ ಪ್ರಮುಖ ಸಾಹಿತ್ಯಗಳ ಚರಿತ್ರೆ, 1914 ಕ್ಕೆ ಮೊದಲು ಸ್ವರ್ಗಸ್ಥರಾದ ಲೇಖಕರ ಜೀವನ ಚರಿತ್ರೆಗಳಿಗೆ ಮೀಸಲಾದ ವಿಶ್ವಕೋಶ.

ಹೆಚ್ಚಿನ ವಿಚಾರ ತಿಳಿಯಲು ಸಹಾಯಕವಾದ ಪುಸ್ತಕ ಲೇಖನ ಸೂಚಿ

Atkins, M G. de st.v. "Revising an Encyclopaedia" in Progress in Library

Science 1966. Robert Collison. Ed., London : Butter worths, 1967. 83-95.

Cheney, Frances Neel. ''Encyclopaedias'', Encyclopaedia of Library and Information Science. Vol. 8. P-45-48. New york : Dekker, 1972.

Coilison, Robert L.''Encyclopaedias and their History throughout the Ages'', 2d Ed. New york : Hafner, 1966.

''Encyclopaedias and civilizations,'' Journal of world History, 9 (3), 1966. 453-481.

Preece, Warren E. ''The organization of Knowledge and the planning of Encyclopaedias'', Journal of world History, Vol. 9. No. 3. 1966. 798–818

''The uses of Encyclopaedias : Past, Present and Future'', American Behavioural Science. 6, 1962. 3–40

Wells, James M. ''The Circle of Knowledge : Encyclopaedias past and Present'', Chicago : New Berry Library, 1968.

ಶಬ್ದಕೋಶಗಳು

ಶಬ್ದಕೋಶ ಭಾಷೆಯೊಂದರ ಪದಗಳ ಅರ್ಥವನ್ನು ಅದೇ ಭಾಷೆಯಲ್ಲಿಯೋ ಅಥವ ಇನ್ನೊಂದು ಭಾಷೆಯಲ್ಲಿಯೋ ಕೊಡುತ್ತದೆ. ಶಬ್ದಕೋಶದ ಪದಗಳು ಸಾಮಾನ್ಯವಾಗಿ ಅಕಾರಾದಿ ಕ್ರಮದಲ್ಲಿ ವ್ಯವಸ್ಥೆಗೊಂಡಿರುತ್ತವೆ. ಹೊರತಾಗಿ ಅನೇಕ ಶಬ್ದಕೋಶಗಳು ಪದಗಳ ಅರ್ಥವನ್ನು ತಿಳಿಸುವುದರ ಜೊತೆಗೆ ಪದಗಳಲ್ಲಿರುವ ಕರಾರುವಾಕ್ಕಾದ ಅಕ್ಷರಗಳು, ಪದ ವಿಭಾಗ, ಪದಗಳ ಉಚ್ಚಾರಣೆಗಳನ್ನು ಸೂಚಿಸುತ್ತವೆ. ಶಬ್ದ ಕೋಶಗಳು ಪದಗಳ ಮೂಲ, ಹುಟ್ಟು, ಬೆಳವಣಿಗೆ, ಪ್ರಮುಖ ಸ್ಥಳನಾಮಗಳು, ಐತಿಹಾಸಿಕ ಪೌರಾಣಿಕ ವ್ಯಕ್ತಿಗಳ ಹೆಸರು ಗಳು, ವಿದೇಶೀ ಪದಗಳು, ಸಮಾನಾರ್ಥ ಹಾಗೂ ವಿರೋ ಧಾರ್ಥ ಪದಗಳನ್ನು ಕೊಡುವುದುಂಟು. ಪದಗಳು ಗ್ರಾಮ್ಯವೇ, ದೇಶಿಯೇ, ವಿದೇಶಿಯೇ ಎಂಬುದನ್ನು ಹಲವು ವೇಳೆ ತಿಳಿಸುವು ದಲ್ಲದೆ ಪದ ಕರ್ತೃ, ಕರ್ಮ, ಕ್ರಿಯಾಪದವೇ, ಭೂತ, ಭವಿಷ್ಯತ್, ವರ್ತಮಾನಕಾಲ ರೂಪ ಹೊಂದಿದೆಯೇ, ಏಕ ವಚನವೇ, ಬಹುವಚನವೇ ಮುಂತಾದ ವ್ಯಾಕರಣ ಸಂಬಂಧಿ ವಿವರಗಳನ್ನೂ ಒದಗಿಸುತ್ತವೆ. ಅನೇಕ ಶಬ್ದಕೋಶಗಳು ಸಚಿತ್ರವಾಗಿರುವುದಲ್ಲದೆ ವಿಶ್ವಕೋಶಗಳಂತೆ ಹಲವು ರೀತಿಯ ವಿಚಾರಗಳನ್ನೂ ಒಳಗೊಂಡಿರುತ್ತವೆ. ರ್‍ಯಾಂಡಂ ಹೌಸ್ ಶಬ್ದ ಕೋಶ **(Random House Dictionary)**, 64 ಪುಟ ಗಳ ಭೂಪಟಗಳು, ಪ್ರಪಂಚ ಚರಿತ್ರೆಯ ಪ್ರಮುಖ ಘಟನೆಗಳ ತಾರೀಖುಗಳು, ಅಮೆರಿಕ ಕಾಲೇಜು, ವಿಶ್ವವಿದ್ಯಾಲಯಗಳ ಪಟ್ಟಿ, 35 ಪುಟಗಳ ಭೌಗೋಳಿಕ ವಿಚಾರಗಳು-ಇತ್ಯಾದಿಗಳ ನ್ನೊಳಗೊಂಡಿದೆ.

ಶಬ್ದಕೋಶಗಳ ವೈವಿಧ್ಯತೆ

ಶಬ್ದಕೋಶಗಳನ್ನು ಅನೇಕರು ನೋಡಿರುವರಾದರೂ ಅವುಗಳ ವಿಸ್ತಾರ, ವೈವಿಧ್ಯತೆ, ಅವುಗಳಿಂದ ಆಗಬಹುದಾದ ಅನೇಕ ವಿಧವಾದ ಪ್ರಯೋಜನಗಳನ್ನು ಚೆನ್ನಾಗಿ ತಿಳಿದಿಲ್ಲ. ಶಬ್ದಕೋಶಗಳಲ್ಲಿ ಹಲವು ವಿಧಗಳುಂಟು. ವೆಬ್‌ಸ್ಟರನ ನೂತನ ಅಂತರ್‍ರಾಷ್ಟ್ರೀಯ ಶಬ್ದಕೋಶ (Webster's New International Dictionary) ದಂತೆ ಕೆಲವು ಸಂಪೂರ್ಣ ಶಬ್ಧಕೋಶಗಳಾದರೆ ಹಲವು ವೆಬ್‌ಸ್ಟರನ ಕಾಲೇಜು ಶಬ್ದಕೋಶ Webster's Collegiate Dictionary) ದಂತೆ ಸಂಕ್ಷಿಪ್ತ ಶಬ್ದ ಕೋಶಗಳು. ಹಲವು ಶಬ್ದಕೋಶಗಳು 'ಚಾರಿತ್ರಿಕ ಸ್ವರೂಪ' ಹೊಂದಿದ್ದು ಪ್ರತಿ ಪದವೂ ಬಳಕೆಗೆ ಬಂದ ಕಾಲ, ನಂತರ ಆ ಪದದ ಅರ್ಥದಲ್ಲಿ, ಉಪಯೋಗದಲ್ಲಿ ಆದ ಬದಲಾವಣೆಗಳನ್ನು ಆಯಾ ಭಾಷೆಯ ಪ್ರಮುಖ ಲೇಖಕರ ಬರವಣಿಗೆಯಲ್ಲಿನ ಆಧಾರ ವಾಕ್ಯಗಳ ಉದಾಹರಣೆ ಕೊಟ್ಟು ತಿಳಿಸುತ್ತವೆ. ಆಕ್ಸ್‌ಫರ್ಡ್ ಇಂಗ್ಲಿಷ್ ಶಬ್ದಕೋಶ (Oxford English Dictionary) ಇಂತಹ ಅತ್ಯುತ್ತಮ ಉದಾಹರಣೆ. ಕೆಲವು ಶಬ್ದಕೋಶಗಳು ಅರ್ಥವಿವರಣೆ ಕೊಡದೆ ಅಮರಕೋಶದಂತೆ ಸಮಾನಾರ್ಥ ಪದಗಳನ್ನು ಮಾತ್ರ ಕೊಡುತ್ತವೆ. ಮತ್ತೆ ಕೆಲವು ಪದಗಳ ಉಪಯೋಗದ 'ಸರಿ-ತಪ್ಪು'ಗಳನ್ನು ಸೂಚಿಸಲೆಂದೇ ಇರುತ್ತವೆ. ಫೌಲರನ ಪದೋಪಯೋಗ ಶಬ್ದಕೋಶ (Fowler's Dictionary of Usage) ಇಂಥದ್ದು. ಪ್ರತಿಯೊಂದು ಭಾಷೆಯಲ್ಲಿಯೂ ಪ್ರಥಮಾಕ್ಷರಿಗಳು ನಿರಂತರವಾಗಿ ಸೃಷ್ಟಿಯಾಗುತ್ತಿದ್ದು ಅವುಗಳ ಅರ್ಥವಿವರಣೆ ಕೊಡಲೆಂದೇ

ಕೆಲವು ಶಬ್ದಕೋಶಗಳುಂಟು. ಪ್ರಥಮಾಕ್ಷರಿ ಶಬ್ದಕೋಶ (Acronyms and Initialisms Dictionary), ಇಂತಹ ಒಂದು ಉದಾಹರಣೆ. ಪ್ರಪಂಚ ಪುಸ್ತಕ ಶಬ್ದಕೋಶ (World Book Dictionary) ದಂತೆ ಕೆಲವು ಕಿರಿಯರು ಹಾಗೂ ಶಾಲಾ ವಿದ್ಯಾರ್ಥಿಗಳ ಉಪಯೋಗಕ್ಕೆಂದೇ ರೂಪು ಗೊಂಡಿದ್ದರೆ ವೆಬ್‌ಸ್ಟರನ ನೂತನ ಅಂತರ್ರಾಷ್ಟ್ರೀಯ ಶಬ್ದಕೋಶ ಪ್ರೌಢರ ಉಪಯೋಗಕ್ಕೆಂದು ರೂಪುಗೊಂಡದ್ದು.

ಬಹುಭಾಷಾ ಶಬ್ದಕೋಶಗಳು

ಡಾ॥ ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶ ದಂತೆ ಶಬ್ದಕೋಶ ಒಂದೇ ಭಾಷೆಯ ಪದಗಳಿಗೆ ಮಿತಿ ಗೊಂಡಿರಬಹುದು ಅಥವ ಕಿಟ್ಟೆಲ್ ಕನ್ನಡ-ಇಂಗ್ಲಿಷ್ ನಿಘಂಟಿ ನಂತೆ ಒಂದು ಭಾಷೆಯ ಪದಗಳಿಗೆ ಇನ್ನೊಂದು ಭಾಷೆಯ ಸಮಾನಾರ್ಥಪದಗಳನ್ನು ಸೂಚಿಸುವ ಶಬ್ದಕೋಶ ಆಗಿರ ಬಹುದು. ಕೆಲವು ಶಬ್ದಗಳು ಎರಡಕ್ಕಿಂತ ಹೆಚ್ಚಿನ ಭಾಷೆಗಳ ನ್ನೊಳಗೊಂಡು ಬಹು ಭಾಷಾ ಶಬ್ದಕೋಶಗಳಾಗಿರುತ್ತವೆ. ಮದರಾಸು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ದ್ರಾವಿಡ ತುಲನಾತ್ಮಕ ಪದಸಂಗ್ರಹ' (Dravidian Comparative Vocabulary) ಇಂಗ್ಲಿಷ್, ತಮಿಳು, ತೆಲುಗು, ಮಲೆಯಾಳಂ, ಕನ್ನಡ ಹಾಗೂ ತುಳು ಭಾಷೆಗಳ ಶಬ್ದಕೋಶ ವಾದರೆ, ವಿಶ್ವನಾಥ ದಿನಕರ ನರವಣೆಯವರ 'ಭಾರತೀಯ ವ್ಯವಹಾರಕೋಶ' ಬಹುಭಾಷಾ ಶಬ್ದಕೋಶವಾಗಿದ್ದು ಇಂಗ್ಲಿಷನ್ನೂ ಸೇರಿ ಹದಿಮೂರು ಭಾಷೆಗಳ ಶಬ್ದಕೋಶ ವಾಗಿದೆ.

ಸಾಮಾನ್ಯ ಹಾಗೂ ವಿಶೇಷ ಶಬ್ದಕೋಶಗಳು

ಶಬ್ದಕೋಶಗಳು ಭಾಷಾ ಸಂಪತ್ತೆಲ್ಲವನ್ನು ಒಳಗೊಳ್ಳುವ ಪ್ರಯತ್ನ ಮಾಡಬಹುದು ಅಥವ ಸಂಕ್ಷಿಪ್ತವಾಗಿರಬಹುದು. ಹದಿಮೂರು ಸಂಪುಟಗಳಿರುವ ಆಕ್ಸ್‌ಫರ್ಡ್ ಇಂಗ್ಲಿಷ್ ಶಬ್ದಕೋಶ (Oxford English Dictionary) ನಿರ್ಮಾಣಕ್ಕೆ ನೂರಾರು ಮಂದಿ ಪಂಡಿತರ ಸೇವೆ ದೊರೆತಿದ್ದರೂ ಎಪ್ಪತ್ತುವರ್ಷ ಬೇಕಾಯಿತು. ಐದು ಲಕ್ಷಕ್ಕೂ ಹೆಚ್ಚಿನ ಪದಗಳ ಅರ್ಥವಿವರಣೆ ಇರುವ ಈ ಶಬ್ದಕೋಶದಲ್ಲಿ ಆಧಾರ ವಾಕ್ಯಗಳ ಸಂಖ್ಯೆ ಸುಮಾರು ಇಪ್ಪತ್ತುಲಕ್ಷ. 'Set' ಎನ್ನುವ ಒಂದು ಸಾಮಾನ್ಯ ಪದದ ಅರ್ಥಗಳ ವಿವರಣೆಗೆ ಇಪ್ಪತ್ತು ಪುಟ ಮೀಸಲಾಗಿದ್ದು, ಈ ಶಬ್ದಕೋಶದ ವಿಸ್ತಾರ ವೈವಿಧ್ಯತೆಗಳನ್ನಿದು ಸೂಚಿಸುತ್ತದೆ. ಬೃಹತ್ ಶಬ್ದಕೋಶಗಳು ವಿಶ್ವಕೋಶಗಳಂತೆಯೇ ಅನೇಕಮಂದಿ ಪಂಡಿತರ ಪರಿಣತರ ಶ್ರಮದಿಂದ ರೂಪುಗೊಳ್ಳುತ್ತವೆ.

ವಿಶೇಷ ಶಬ್ದಕೋಶಗಳು ಜ್ಞಾನಲೋಕದ ಯಾವುದಾದರೊಂದು ವಿಭಾಗಕ್ಕೆ ಸೀಮಿತವಾಗಿರುತ್ತವೆ. ಡೋರ್‌ಲ್ಯಾಂಡರ ಸಚಿತ್ರ ವೈದ್ಯಕೀಯ ಶಬ್ದಕೋಶ (Doreland's Illustrated Medical Dictionary), ವೈದ್ಯಶಾಸ್ತ್ರಕ್ಕೆ ಸಂಬಂಧ ಪಟ್ಟ ಪದಗಳಿಗೂ, ಶಿಕ್ಷಣ ಶಬ್ದಕೋಶ (Dictionary of Education) ಶಿಕ್ಷಣಶಾಸ್ತ್ರದ ಪದಗಳಿಗೂ, ಬ್ಲಾಕರ ನ್ಯಾಯಶಾಸ್ತ್ರ ಶಬ್ದಕೋಶ (Block's Law Dicitonary) ನ್ಯಾಯಶಾಸ್ತ್ರ ಪದಸಂಪತ್ತಿನ ವಿವರಣೆಗೂ ಮೀಸಲು. ಭಾರತೀಯ ಹೆಂಗಸರ ಶೃಂಗಾರಕ್ಕೆ ಸಂಬಂಧಿಸಿದ ಪದಗಳಿಗೆ ಮೀಸಲಾಗಿರುವ (Dictionary

of Fashion and Beauty for Indian Women) ಶಬ್ದಕೋಶಗಳ ವೈವಿಧ್ಯತೆ ಜೀವನದಷ್ಟೇ ವಿಸ್ತಾರವಾದದ್ದೆಂಬುದನ್ನು ಸೂಚಿಸುತ್ತದೆ.

ಭಾಷೆಯ ಪ್ರತಿಬಿಂಬವೋ ಭಾಷಾಪರಿಶುದ್ಧತೆ ಕಾಯುವ ಪೋಲೀಸೋ?

ಶಬ್ದಕೋಶ ಭಾಷಾಪರಿಶುದ್ಧತೆ ರಕ್ಷಿಸುವ ಜವಾಬ್ದಾರಿ ಹೊಂದಿದೆಯೆಂದೂ, ಪದಗಳ ಹಾಗೂ ಅವುಗಳ ಉಪಯೋಗದಲ್ಲಿ ಸ್ವೀಕಾರಾರ್ಹವಾದದ್ದು ಯಾವುದು, ತ್ಯಾಜ್ಯವಾದದ್ದು ಯಾವುದು ಎಂಬುದನ್ನು ಶಬ್ದಕೋಶ ಸೂಚಿಸಬೇಕೆಂದೂ ಹಲವರು ಅಭಿಪ್ರಾಯಪಡುತ್ತಾರೆ. ಜನಪ್ರಿಯ ದಿನಪತ್ರಿಕೆಗಳು, ಸಾಮಾನ್ಯ ವಾಚಾಳಿ ರಾಜಕಾರಣಿಗಳು ಭಾಷೆಯನ್ನು ವಿರೂಪಗೊಳಿಸಿ ಕೀಳುಮಟ್ಟಕ್ಕಿಳಿಯುವುದನ್ನು ತಡೆಯಲೆತ್ನಿಸಿ ಭಾಷಾಪರಿಶುದ್ಧತೆಯನ್ನು ಕಾಯುವುದು ಶಬ್ದಕೋಶದ ಮುಖ್ಯ ಕರ್ತವ್ಯಗಳಲ್ಲೊಂದು ಎಂಬುದು ಇಂಥವರ ವಾದ. ಆದ್ದರಿಂದಲೇ ಶಬ್ದಕೋಶ ಪದಪ್ರಯೋಗ, ಅರ್ಥಗಳ 'ಸರಿ ತಪ್ಪು'ಗಳನ್ನು ನಿರ್ದೇಶಿಸಬೇಕೆಂದು ಈ ಗುಂಪಿನ ಆಗ್ರಹ. ಮತ್ತೆಕೆಲವರು ಭಾಷೆಯ ಸರಿ ತಪ್ಪುಗಳನ್ನು ನಿರ್ಣಯಿಸುವುದು ಶಬ್ದಕೋಶ ಕರ್ತೃವಿನ ಕೆಲಸ ಅಲ್ಲವೆಂದೂ, ಶಬ್ದಕೋಶಕಾರ ಆಧುನಿಕ ಭಾಷೆಯನ್ನು ಇದ್ದಕ್ಕಿದ್ದಂತೆ ಪ್ರತಿಬಿಂಬಿಸಬೇಕೆಂದೂ, ಅವನ ಕೆಲಸ ಅಷ್ಟೇ ಎಂದೂ, ಅವನು ಭಾಷಾ ನ್ಯಾಯಾಧೀಶ ಅಲ್ಲವೆಂದೂ ಹೇಳುತ್ತಾರೆ. ಇಂದು ಅನೇಕ ಶಬ್ದಕೋಶಗಳು ಭಾಷೆಯನ್ನು ಇದ್ದಕ್ಕಿದ್ದಂತೆ ಪ್ರತಿಬಿಂಬಿಸುವುದಷ್ಟೇ ತಮ್ಮ ಕೆಲಸ ಎಂದು ಭಾವಿಸಿ ಸರಿ-ತಪ್ಪುಗಳ

ನಿರ್ಣಯ ತಮ್ಮ ಕಾರ್ಯವ್ಯಾಪ್ತಿ ಮೀರಿದ್ದೆಂದು ಗ್ರಹಿಸಿ ಕೆಲಸ ಮಾಡುತ್ತಿವೆ.

ನಿರಂತರ ಪರಿಷ್ಕರಣೆ

ಎಲ್ಲ ವಸ್ತುಗಳಂತೆಯೇ ಪದಗಳಿಗೂ ಹುಟ್ಟು ಸಾವುಗಳುಂಟು; ಅರ್ಥವ್ಯತ್ಯಾಸದ ಏಳುಬೀಳುಗಳುಂಟು. ಇಂದು ಸರಕಾರಿ ಕಛೇರಿಗಳಲ್ಲಿ ಜವಾನರಿಗೆ ಮೀಸಲಾಗಿರುವ 'ಸ್ಟೂಲು' ಪದದ ಅರ್ಥ ಒಂದುಕಾಲದಲ್ಲಿ ರಾಜಸಿಂಹಾಸನವನ್ನೂ ಒಳಗೊಂಡಿತ್ತೆಂಬುದನ್ನು ನೆನೆದಾಗ ಈ ಅಂಶ ಮನದಟ್ಟಾಗುತ್ತದೆ. ಆದ್ದರಿಂದಲೇ ಯಾವುದೇ ಶಬ್ದಕೋಶ ಎಂದೆಂದಿಗೂ ಒಂದೇರೀತಿಯಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಭಾಷಾ ಪ್ರಪಂಚದ ಬದಲಾವಣೆಗಳನ್ನು ಒಳಗೊಂಡು ಶಬ್ದಕೋಶಗಳ ಹೊಸ ಅವತರಣಿಕೆಗಳ ಪ್ರಕಟಣೆ ಆಗಿಂದಾಗ ಆಗಬೇಕಾಗುತ್ತದೆ. ಆದ್ದರಿಂದಲೇ ಪ್ರಮುಖ ಶಬ್ದಕೋಶಗಳು ಪರಿಷ್ಕೃತ ಮುದ್ರಣಗಳನ್ನು ಹೊರತರುತ್ತಿರುತ್ತವೆ. ಪರಿಷ್ಕೃತವಾಗದ ಶಬ್ದಕೋಶವನ್ನು ಉಪಯೋಗಿಸುವಾಗ ನಾವು ಸೂಕ್ತ ಎಚ್ಚರಿಕೆ ವಹಿಸಬೇಕಾಗುತ್ತದೆ. ಯಾವುದೇ ಶಬ್ದಕೋಶವನ್ನು ಉಪಯೋಗಿಸುವುದಕ್ಕೆ ಮೊದಲು ಅದರ ಮುನ್ನುಡಿ ಓದಿ, ಅದರ ಇತಿ-ಮಿತಿ, ಕಾರ್ಯವ್ಯಾಪ್ತಿ, ವಿಶೇಷ ವೈವಿಧ್ಯತೆಗಳನ್ನು ತಿಳಿದುಕೊಂಡರೆ ಶಬ್ದಕೋಶವನ್ನು ಸಾರ್ಥಕ ರೀತಿಯಲ್ಲಿ ಉಪಯೋಗಿಸಬಹುದು. ಆಗ ಶಬ್ದಕೋಶ ನೀರಸ ಪದಗಳ ಪಟ್ಟಿ ಆಗದೆ ಜ್ಞಾನ ಭಂಡಾರವೇ ಆಗುತ್ತದೆ.

ಕೆಲವು ಪ್ರಮುಖ ಶಬ್ದಕೋಶಗಳು

1. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು. ಮೈಸೂರು : ಪ್ರಸಾರಾಂಗ, ಮೈಸೂರು

ವಿಶ್ವವಿದ್ಯಾನಿಲಯ, 1965.

2. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು.
ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

3. Kittel's Kannada-English Dictionary (Revised and Englarged by M. Mariyappabhat).
Madras: University of Madras, 1968. 4 Vols.

4. Webster's Third New International Dictionary. (ವೆಬ್‌ಸ್ಟರನ ಮೂರನೆಯ ನೂತನ ಅಂತರ್ರಾಷ್ಟ್ರೀಯ ಶಬ್ದಕೋಶ) G. and C. Merriam Webster Co., 1971.
2600 ಕ್ಕಿಂತ ಹೆಚ್ಚು ಪುಟ ಇರುವ ನಾಲ್ಕುವರೆ ಲಕ್ಷಕ್ಕೂ ಮೀರಿದ ಪದಸಂಪತ್ತುಳ್ಳ ಇಂಗ್ಲಿಷ್ ಶಬ್ದಕೋಶ.

5. World Book Dictionary (ಪ್ರಪಂಚ ಪುಸ್ತಕ ಶಬ್ದಕೋಶ.)
ಸುಮಾರು ಎರಡುಲಕ್ಷ ಪದಸಂಪತ್ತು, ಎರಡುಸಾವಿರ ಚಿತ್ರಗಳನ್ನುಳ್ಳ ಕಿರಿಯರ ಶಬ್ದಕೋಶ.

6. Oxford English Dictionary (ಆಕ್ಸ್‌ಫರ್ಡ್ ಇಂಗ್ಲಿಷ್ ಶಬ್ದಕೋಶ), Oxford: Clarenden Press, 1933. 13 Vols.

ಐದುಲಕ್ಷ ಪದಸಂಪತ್ತು, ಇಪ್ಪತ್ತುಲಕ್ಷ ಆಧಾರವಾಕ್ಯ ಗಳುಳ್ಳ ಈ ಶಬ್ದಕೋಶ ಒಂದು ಮೇರುಕೃತಿ.

7. Fowler, Henry Watson, Dictionary of Modern English Usage (ಆಧುನಿಕ ಇಂಗ್ಲಿಷ್ ಪದಪ್ರಯೋಗ ಶಬ್ದಕೋಶ), New-york: Oxford University Press 1965.
ಇಂಗ್ಲಿಷ್ ಪದಪ್ರಯೋಗಗಳ ಅಧಿಕೃತ ಎನಿಸಿರುವ ಶಬ್ದಕೋಶ.

8. Acronyms and Initialisms Dictionary (ಪ್ರಥಮ ತಳಿ ಶಬ್ದಕೋಶ). 3d Ed., Detroit: Gale Research Co., 1970.

9. ನರವಣೆ, ವಿಶ್ವನಾಥ ದಿನಕರ. ಸಂ.
ಭಾರತೀಯ ವ್ಯವಹಾರ ಕೋಶ, 1961.
ಹದಿಮೂರು ಭಾರತೀಯ ಭಾಷೆಗಳ ದಿನಬಳಕೆಯ ಪದಗಳ ಶಬ್ದಕೋಶ.

10. Yule, Henry & Burnell, A. C. Dictionary of Indian English (ಭಾರತೀಯ ಇಂಗ್ಲಿಷ್ ಶಬ್ದಕೋಶ) Madras: Indian Universities Press, 1966.
ಭಾರತೀಯ ಇಂಗ್ಲಿಷ್ ಪದಗಳ ಶಬ್ದಕೋಶ.

11. English-Tamil Dictionary. Chettiar A. C. Ed., (ಇಂಗ್ಲಿಷ್-ತಮಿಳು ಶಬ್ದಕೋಶ)

Madras : University of Madras, 1961-1965. 3 Vols.

ಸಂಕ್ಷಿಪ್ತ ಆಕ್ಸ್‌ಫರ್ಡ್ ವಿಶ್ವಕೋಶದ ಆಧಾರದಿಂದ ರೂಪುಗೊಂಡಿದೆ.

12. Hindi Shabdasagar (ಹಿಂದಿ ಶಬ್ದಸಾಗರ), Varanasi : Nagri Pracharini Sabha, 1961–9651. 10 Vols.

ಶಬ್ದಕೋಶದೊಡನೆ ಹಿಂದಿಭಾಷೆ, ಸಾಹಿತ್ಯಗಳ ಚಾರಿತ್ರಿಕ ಹಿನ್ನೆಲೆ ಇದೆ.

13. Shabda Kalpadruma (ಶಬ್ದ ಕಲ್ಪದ್ರುಮ), Varanasi : Chowkhamba Sanskrit Series, 1961. 5 Vols.

ಸಂಸ್ಕೃತ ಪದಮೂಲಗಳನ್ನು ಪಾಣಿನಿ ಪ್ರಕಾರ ಕೊಡಲಾಗಿದ್ದು ಸಂಗೀತ, ಖಗೋಳಶಾಸ್ತ್ರ ಪದಗಳನ್ನೊಳಗೊಂಡಿದೆ. ವೇದಸಾಹಿತ್ಯದ ಆಧಾರ ವಾಕ್ಯಗಳಿವೆ.

ಹೆಚ್ಚಿನ ವ್ಯಾಸಂಗಕ್ಕೆ ಸಹಾಯಕವಾದ ಪುಸ್ತಕ ಲೇಖನ ಸೂಚಿ

Collison, Robert, Dictionaries of Foreign Languages. New york : Hafner Publishing Co., 1965.

'Dictionaries and Encyclopaedias', London : National Book League, 1966.

Hulbert, James, R. Dictionaries: British and American. 2d rev. Ed., London: Deutsch, 1969.

Partridge, Eric. The Gentle Art of Lexicography. London : Andre Deutsch, 1963.

Sledd, James H. and Ebbitts, wilma, eds, Dictionaries and That Dictionary. Chicago : Scott, Foresman, 1962.

Stubbs, K. L. "Dictionaries", Encyclopaedia of Library and Information Science. Vol. 7. 170-207. New york : Dekker, 1972.

Whittaker, Kenneth. Dictionaries. New york Philosophical Library, 1966.

ವಾರ್ಷಿಕ ಪುಸ್ತಕ, ಡೈರಕ್ಟರಿ, ಕೈಪಿಡಿ ಮೊದಲಾದ ವಿಷಯಮೂಲಗಳು

ಕರ್ನಾಟಕದ ಜನಸಂಖ್ಯೆ ಎಷ್ಟು? ಜಪಾನಿನ ವಿಸ್ತೀರ್ಣ ಎಷ್ಟು? ಸ್ವಿಟ್ಜರ್‌ಲೆಂಡಿನಲ್ಲಿ ಎಂಥ ಸರಕಾರ ಇದೆ? ಇರಾನಿನಲ್ಲಿ ಎಷ್ಟು ಮಂದಿ ಕಾಲೇಜು ವಿದ್ಯಾರ್ಥಿಗಳಿದ್ದಾರೆ? ಒಂದು ಅಮೆರಿಕನ್ ಡಾಲರಿಗೆ ಎಷ್ಟು ಭಾರತದ ರೂಪಾಯಿಗಳು? ಪ್ರಪಂಚದ ಅತ್ಯಂತ ಎತ್ತರವಾದ ಪರ್ವತಶಿಖರ ಯಾವುದು? ರಷ್ಯಾದಲ್ಲಿ ಜೀವನ ವೆಚ್ಚ ಎಷ್ಟು? ಆಸ್ಟ್ರೇಲಿಯದ ಜನಸಾಮಾನ್ಯರ ಸರಾಸರಿ ವಾರ್ಷಿಕ ಆದಾಯ ಎಷ್ಟು? ಭಾರತದಲ್ಲಿ ಈಜಿಪ್ಟಿನ ರಾಯಭಾರಿ ಯಾರು? ಕೊಲಂಬಿಯ ಸರಕಾರದಲ್ಲಿ ಎಷ್ಟು ಮಂದಿ ಮಂತ್ರಿಗಳಿದ್ದಾರೆ? ಮೊದಲಾದ ನೂರಾರು ಪ್ರಶ್ನೆಗಳಿಗೆ ವಾರ್ಷಿಕ ಪುಸ್ತಕ, ಡೈರೆಕ್ಟರಿ, ಕೈಪಿಡಿಗಳು ನೇರವಾದ ಉತ್ತರ ಕೊಡುತ್ತವೆ. ದೇಶಗಳು, ವ್ಯಕ್ತಿಗಳು, ಘಟನೆಗಳು ಮೊದಲಾದ ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಅನೇಕ ಅಂಕಿ ಅಂಶಗಳನ್ನು ಇಂಥ ಆಕರ ಗ್ರಂಥಗಳು ಒದಗಿಸುತ್ತವೆ. ವಿಶ್ವಕೋಶಗಳಂತೆ ಇವೂ ಸಹ ಜೀವನದ ಎಲ್ಲ ಮುಖಗಳನ್ನೂ ಒಳಗೊಂಡಿರಬಹುದು ಅಥವ ನಿರ್ದಿಷ್ಟ ವಿಷಯಗಳಿಗೆ ಮೀಸಲಾಗಿರಬಹುದು. ಈ ಗ್ರಂಥಗಳಲ್ಲಿರುವ ವಿಷಯಗಳು ಬಹುಮಟ್ಟಿಗೆ ವಿಶ್ವಕೋಶ, ಶಬ್ದಕೋಶ, ಜೀವನಚರಿತ್ರೆ, ಭೌಗೋಳಿಕ ಆಕರ ಗ್ರಂಥಗಳಲ್ಲಿಯೂ ಇರಬಹುದಾದರೂ ಇವುಗಳ ಉಪಯೋಗದಿಂದ ಅಂಕಿ ಅಂಶಗಳಿಗೆ ಸಂಬಂಧಪಟ್ಟ ಹಾಗೂ ಸಮಕಾಲೀನ ವಿಚಾರಗಳನ್ನು ಬೇಗ ಕಂಡುಕೊಳ್ಳಬಹುದು.

ವಾರ್ಷಿಕ ಪುಸ್ತಕಗಳು

ಪ್ರತಿ ವರ್ಷ ಪ್ರಕಟವಾಗುವ ವಾರ್ಷಿಕಗಳಲ್ಲಿ 'ನಿನ್ನೆ' ವಿಚಾರಗಳಿಗಿಂತ 'ಇಂದಿನ' ವಿಚಾರಗಳಿಗೆ ಪ್ರಾಶಸ್ತ್ಯ ಹೆಚ್ಚು. ಆಯಾ ವರ್ಷದ ಪ್ರಮುಖ ಘಟನೆಗಳು, ಮಹತ್ವ ವಿಚಾರಗಳು ಹಾಗೂ ಅಂಕಿ ಅಂಶಗಳನ್ನಿವು ಒದಗಿಸುತ್ತವೆ. ಎಲ್ಲ ಪ್ರಮುಖ ವಿಶ್ವ ಕೋಶಗಳೂ ವಾರ್ಷಿಕ ಪುಸ್ತಕಗಳನ್ನು ಪ್ರಕಟಿಸಿ ಸಮಕಾಲೀನ ಬೆಳವಣಿಗೆಗಳನ್ನು ವಾಚಕರ ಗಮನಕ್ಕೆ ತರುತ್ತವೆ. ಪ್ರಪಂಚಾದ್ಯಂತದ ಪ್ರಮುಖ ಬೆಳವಣಿಗೆಗಳ ಸಂಕ್ಷಿಪ್ತ ಪರಿಚಯ ಪಡೆಯಲು ವಿಶ್ವಕೋಶ ವಾರ್ಷಿಕ ಪುಸ್ತಕ ಉತ್ತಮ ಸಾಧನ.

ಭಾರತ ಸರಕಾರ ಪ್ರಕಟಿಸುವ India A Reference Annual (ಭಾರತ ವಾರ್ಷಿಕ ಆಕರ ಗ್ರಂಥ) ಭಾರತಕ್ಕೆ ಸಂಬಂಧಪಟ್ಟ ಅನೇಕ ಅಂಕಿಅಂಶಗಳನ್ನು ಕೊಡುತ್ತದೆ. ಭಾರತೀಯ ರಾಜ್ಯಗಳ ವಿಚಾರಕ್ಕೂ ಕೆಲವು ಪುಟಗಳು ಮೀಸಲಾಗಿರುತ್ತವೆ. ಭಾರತದ ಬಗ್ಗೆ ಇರುವ ಉತ್ತಮ ಪ್ರಕಟಣೆ ಇದು. ಸರಕಾರದ ಅಧಿಕೃತ ಮುದ್ರೆ ಇರುವುದರಿಂದ ಇಲ್ಲಿನ ಅಂಕಿಅಂಶಗಳು ಹೆಚ್ಚು ಸ್ವೀಕಾರಾರ್ಹ. ಕೇರಳದ ಮನೋರಮ ಪತ್ರಿಕೆ ಪ್ರಕಟಿಸುವ Manorama Year Book (ಮನೋರಮ ವಾರ್ಷಿಕ ಪುಸ್ತಕ); Hindustan Year Book and Who's Who (ಹಿಂದುಸ್ಥಾನ ವಾರ್ಷಿಕ ಪುಸ್ತಕ) ಭಾರತದ ನಾನಾ ವಿಚಾರಗಳು, ಅಂಕಿಅಂಶಗಳು, ವಿವರಗಳನ್ನೊಳಗೊಂಡ ವಾರ್ಷಿಕ ಪ್ರಕಟಣೆಗಳು. Statesman's Year Book (ಸ್ಟೇಟ್ಸ್‌ಮನ್ಸ್ ವಾರ್ಷಿಕ

ಪುಸ್ತಕ), ಪ್ರಪಂಚದ ರಾಷ್ಟ್ರಗಳ ಸಂಕ್ಷಿಪ್ತ ಪರಿಚಯ, ಅವುಗಳ ರಾಜಕೀಯ ಸ್ವರೂಪ, ಸರಕಾರಗಳ ರೂಪ ರೇಖೆಗಳನ್ನು ತಿಳಿಸುವ ಹೆಸರಾಂತ ಪ್ರಕಟಣೆ. ಪೋಲೆಂಡಿನ ವಾರ್ಷಿಕ ಆಯವ್ಯಯ ಎಷ್ಟು? ಇಂಗ್ಲೆಂಡಿನ ಮುಖ್ಯಮಂತ್ರಿ ಯಾರು? ಉಗಾಂಡದ ಆಡಳಿತಗಾರರು ಯಾರು? ಚಿಲಿಯಲ್ಲಿ ಎಂಥ ಸರಕಾರ ಇದೆ ಇತ್ಯಾದಿ ವಿಚಾರಗಳಿಗೆ ಇದು ಉತ್ತಮ ಸಮಾಚಾರ ಮೂಲ. Investor's India Year Book (ಭಾರತೀಯ ಬಂಡವಾಳದಾರರ ವಾರ್ಷಿಕ ಪುಸ್ತಕ), ಭಾರತದ ಬ್ಯಾಂಕುಗಳು, ಕಂಪನಿಗಳ ಆರ್ಥಿಕ ಸ್ಥಿತಿ, ಡಿವಿಡೆಂಡ್, ಷೇರುಗಳ ಬೆಲೆ ಮುಂತಾದ ವಿವರಗಳನ್ನುಕೊಡುತ್ತದೆ. Common Wealth Universities Year Book (ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ವಾರ್ಷಿಕ ಪುಸ್ತಕ), ಕಾಮನ್‌ವೆಲ್ತ್ ದೇಶಗಳಲ್ಲಿರುವ ವಿಶ್ವವಿದ್ಯಾನಿಲಯಗಳ ವಿವರಗಳನ್ನು ಕೊಡುತ್ತದೆ. ಕೆನಡದಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳಿವೆ? ಭೌತಶಾಸ್ತ್ರ ಶಿಕ್ಷಣ ಕೊಡುವ ಎಷ್ಟು ವಿಶ್ವವಿದ್ಯಾನಿಲಯಗಳು ಆಸ್ಟ್ರೇಲಿಯದಲ್ಲಿವೆ? ನೈಜೀರಿಯ ವಿಶ್ವವಿದ್ಯಾನಿಲಯ ಯಾವ ಯಾವ ಪದವಿಗಳನ್ನು ಕೊಡುತ್ತದೆ? ಭಾರತದ ವಿಶ್ವಭಾರತಿ ವಿಶ್ವವಿದ್ಯಾನಿಲಯದ ವಿಳಾಸ ಏನು? ಮೈಸೂರು ವಿಶ್ವವಿದ್ಯಾನಿಲಯದ ಗೃಹವಿಜ್ಞಾನ ವಿಭಾಗದ ಮುಖ್ಯಸ್ಥರು ಯಾರು? ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಷ್ಟುಮಂದಿ ಅಧ್ಯಾಪಕರಿದ್ದಾರೆ ಮುಂತಾದ ಪ್ರಶ್ನೆಗಳಿಗೆ ಇಲ್ಲಿ ಉತ್ತರ ಉಂಟು. ಪ್ರತಿ ಕಾಮನ್‌ವೆಲ್ತ್ ರಾಷ್ಟ್ರದ ವಿಶ್ವವಿದ್ಯಾಲಯ ಶಿಕ್ಷಣದ ಹಿನ್ನೆಲೆ ಲೇಖನಗಳಿರುವುದು ಈ ಪ್ರಕಟಣೆಯ ಒಂದು ವೈಶಿಷ್ಟ್ಯ. ಜೀವನದ ಯಾವುದೇ ವಿಚಾರಕ್ಕೆ

ಸಂಬಂಧಪಟ್ಟ 'ವಿಶೇಷ' ವಾರ್ಷಿಕ ಪ್ರಕಟಣೆಗಳು ಅನೇಕವಿವೆ. ವಾರ್ಷಿಕ ಪುಸ್ತಕವೊಂದರ ಹಲವು ವರ್ಷಗಳ ಪ್ರಕಟಣೆಗಳನ್ನು ಪರಿಶೀಲಿಸುವುದರಿಂದ ಪ್ರಪಂಚದ ಅಥವ ಒಂದು ರಾಷ್ಟ್ರದ ಹಲವು ವರ್ಷಗಳ ಬೆಳವಣಿಗೆಯ ರೀತಿ ನೀತಿಗಳನ್ನು ಸುಲಭವಾಗಿ ಗುರುತಿಸಬಹುದು.

ಡೈರೆಕ್ಟರಿಗಳು

ಮನುಷ್ಯ ಹಾಗೂ ಅವನ ಸಂಘ ಸಂಸ್ಥೆಗಳೇ ಡೈರೆಕ್ಟರಿಗಳ ವಸ್ತು. ಸಂಘ ಶಕ್ತಿಯೇ ಸಮಾಜ ಜೀವನದ ಜೀವಾಳವಾಗಿರುವ ಇಂದಿನ ಪ್ರಪಂಚದಲ್ಲಿ ಡೈರೆಕ್ಟರಿಗಳ ಅವಶ್ಯಕತೆ ಬಹಳ. ಸಂಘ ಸಂಸ್ಥೆಗಳ ಅಥವ ವ್ಯಕ್ತಿಗಳ ಸಂಕ್ಷಿಪ್ತ ವಿವರ, ವಿಳಾಸಗಳನ್ನು ಅಕಾರಾದಿ ಕ್ರಮಪ್ರಕಾರ ಡೈರೆಕ್ಟರಿಗಳು ಕೊಡುತ್ತವೆ. ವಿಳಾಸಗಳನ್ನು ತಿಳಿಯಲು ಡೈರೆಕ್ಟರಿಗಳು ತುಂಬ ಸಹಕಾರಿ. ಕೆಲವು ಡೈರೆಕ್ಟರಿಗಳು ಸಂಘ ಸಂಸ್ಥೆಗಳ ಸ್ಥಾಪನೆಯ ತಾರೀಖು, ಉದ್ದೇಶ, ಕಾರ್ಯಕ್ಷೇತ್ರ, ಅಧಿಕಾರ ವರ್ಗ, ಸದಸ್ಯ ಸಂಖ್ಯೆ ಮೊದಲಾದ ವಿವರಗಳನ್ನೂ, ವ್ಯಕ್ತಿ ವಿಚಾರಗಳನ್ನೂ ತಿಳಿಸುತ್ತವೆ. ಡೈರೆಕ್ಟರಿಗಳು ಸ್ಥಳೀಯವೋ, ರಾಜ್ಯ, ರಾಷ್ಟ್ರಮಟ್ಟದವೋ, ಅಂತರ್ರಾಷ್ಟ್ರೀಯವೋ ಆಗಿರಬಹುದು. ಸರಕಾರಿ ಸಂಸ್ಥೆಗಳ, ಸಾರ್ವಜನಿಕ ಸಂಸ್ಥೆಗಳ, ವಿವಿಧ ವೃತ್ತಿಗಳವರ ಡೈರೆಕ್ಟರಿಗಳಿರುತ್ತವೆ. Directory of Hospitals in India ಭಾರತದಲ್ಲಿರುವ ಆಸ್ಪತ್ರೆಗಳ ವಿವರ, ವಿಳಾಸಗಳನ್ನು ಕೊಟ್ಟರೆ Directory of Booksellers, Publishers, Libraries and Librarians in India, ಭಾರತದಲ್ಲಿರುವ ಪುಸ್ತಕ ವ್ಯಾಪಾರಿಗಳು, ಪ್ರಕಾಶಕರು, ಪುಸ್ತಕಾಲಯಗಳು, ಪುಸ್ತಕಾ

ಲಿಯ ವಿಜ್ಞಾನಿಗಳ ವಿವರ ಕೊಡುತ್ತದೆ. ಟೆಲಿಫೋನು ಡೈರೆಕ್ಟರಿಗಳು ಸಹ ಆವಶ್ಯಕ ಸುದ್ದಿ ಒದಗಿಸುತ್ತವೆ. ಅಸಂಖ್ಯಾತ ಡೈರೆಕ್ಟರಿಗಳಲ್ಲಿ ನಮಗೆ ಬೇಕಾದುದನ್ನು ಹುಡುಕುವ ಕೆಲಸವನ್ನು ಸುಗಮಗೊಳಿಸಲು ಪ್ರಪಂಚದ ಪ್ರಮುಖ ಡೈರೆಕ್ಟರಿಗಳ ವಿವರಣ ಸೂಚಿ (International Bibliography of Directories) ಸಹ ಉಂಟು.

ಕೈಪಿಡಿಗಳು

ಕೈಪಿಡಿಗಳ ಮುಖ್ಯ ಉದ್ದೇಶ ನಿರ್ದಿಷ್ಟ ಕ್ಷೇತ್ರದ ಅಂಕಿ ಅಂಶಗಳು, ವಿಚಾರಗಳನ್ನು ತಿಳಿಸುವುದು. ಹೊಸ ವಿಚಾರಗಳು, ನೂತನ ಬೆಳವಣಿಗೆಗಳಿಗೆ ಕೈಪಿಡಿಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ಇಲ್ಲ. Oxford Companion to English Literature (ಆಕ್ಸ್‌ಫರ್ಡ್ ಇಂಗ್ಲಿಷ್ ಸಾಹಿತ್ಯ ಕೈಪಿಡಿ) ಇಂಗ್ಲಿಷ್ ಸಾಹಿತ್ಯದ ಉತ್ತಮ ಕೈಪಿಡಿ. ವಿಜ್ಞಾನ ವಿಚಾರಗಳಿಗೆ ಮೀಸಲಾದ ಕೈಪಿಡಿಗಳನ್ನು ಅರ್ಥಮಾಡಿಕೊಂಡು ಉಪಯೋಗ ಪಡೆಯಲು ತಕ್ಕಮಟ್ಟಿನ ವಿಷಯದ ಪೂರ್ವ ಜ್ಞಾನ ಅಗತ್ಯ. Radio Engineering Handbook ಅನುಭವಿ ಎಂಜನೀಯರಿಗೆ ಉಪಯುಕ್ತವೇ ಹೊರತು ರೇಡಿಯೋ ರಿಪೇರಿ ಮಾಡಲಪೇಕ್ಷಿಸುವ ವಾಚಕನಿಗೆ ಅದರಿಂದ ಪ್ರಯೋಜನ ಆಗಲಾರದು. ಅನೇಕ ವಿಷಯಗಳ ಕೈಪಿಡಿಗಳು ಜ್ಞಾನಾರ್ಜನೆಗೆ ಸಹಾಯ ಮಾಡುತ್ತವೆ. ವಾರ್ಷಿಕ ಪ್ರಕಟಣೆಗಳು ಹಾಗೂ ಕೈಪಿಡಿಗಳು ಅನೇಕ ವೇಳೆ ತಾವು ಕೊಡುವ ಅಂಕಿಅಂಶಗಳ ಮೂಲಗಳನ್ನು ತಿಳಿಸುತ್ತವೆ. ಅವನ್ನು ವಿಚಾರ ಸೂಚಿಗಳಂತೆ ಉಪಯೋಗಿಸಿ ವಾಚಕರು ಹೆಚ್ಚಿನ ಸಂಶೋಧನೆಗೆ ಮೂಲಾಧಾರಗಳನ್ನು ಪರಿಶೀಲಿಸಬಹುದು.

ಅಂಕಿಅಂಶ ಮೂಲಗಳು

ಆಧುನಿಕ ಜೀವನದಲ್ಲಿ ಸಂಖ್ಯಾ ಶಾಸ್ತ್ರದ ಪ್ರಭಾವ ಅಪಾರ. ಅಂಕಿಅಂಶಗಳ ಆಧಾರ, ಸಹಾಯ ಇಲ್ಲದೆ ವ್ಯಕ್ತಿ, ಸಂಘ, ಸರಕಾರಗಳು ಇಂದು ಏನನ್ನೂ ಮಾಡಲಾರವು. ಎಲ್ಲ ಯೋಜನೆಗಳಿಗೂ, ನಮ್ಮ ಬೆಳವಣಿಗೆಗೂ ಅಂಕಿಅಂಶಗಳೇ ಆಧಾರ. ಬಗೆಬಗೆಯ ಅಂಕಿಅಂಶಗಳ ಶೇಖರಣೆ, ವಿಂಗಡಣೆ ಹಾಗೂ ಅವುಗಳ ವಿವರಣೆಯೇ ಸಂಖ್ಯಾಶಾಸ್ತ್ರದ ಗುರಿ. ಅಂಕಿ ಅಂಶಗಳನ್ನು ಒದಗಿಸುವ ಧ್ಯೇಯದಿಂದಲೇ ಹಲವು ಆಕರ ಗ್ರಂಥಗಳು ರೂಪುಗೊಂಡಿವೆ. ಇವೂ ಸಹ ಸ್ಥಳೀಯ, ರಾಜ್ಯ, ರಾಷ್ಟ್ರ ಅಥವ ಅಂತರ್ರಾಷ್ಟ್ರೀಯ ಮಟ್ಟದ್ದಾಗಿರಬಹುದು. ವಿಶ್ವಸಂಸ್ಥೆ, ಯುನೆಸ್ಕೋಗಳು ಪ್ರಕಟಿಸುವ Statistical year book (ಅಂಕಿಅಂಶಗಳ ವಾರ್ಷಿಕ ಪ್ರಕಟಣೆ) ಇಂಥ ಒಂದು ಪ್ರಮುಖ ಉದಾಹರಣೆ. ಸದಸ್ಯರಾಷ್ಟ್ರಗಳ ನಾನಾ ವಿಚಾರಗಳಿಗೆ ಸಂಬಂಧಪಟ್ಟ ಅಂಕಿಅಂಶಗಳನ್ನಿಲ್ಲಿ ನೋಡ ಬಹುದು. ಮಲೇಷಿಯದಲ್ಲಿ ಎಷ್ಟು ಪತ್ರಿಕೆಗಳು ಪ್ರಕಟವಾ ಗುತ್ತವೆ? ಫ್ರಾನ್ಸ್‌ನಲ್ಲಿ ಎಷ್ಟು ಟೆಲಿವಿಜನ್ನುಗಳಿವೆ? ಜಪಾನಿ ನಲ್ಲಿ ಎಷ್ಟು ಪುಸ್ತಕಾಲಯಗಳಿವೆ? ಲೆಬನಾನಿನಲ್ಲಿ ಎಷ್ಟು ಮಂದಿ ಬಾಲಕರು ಶಾಲೆಗಳಿಗೆ ಹೋಗುತ್ತಾರೆ? ಅಫ್‌ಘಾನಿ ಸ್ತಾನದ ಶೇ. ಎಷ್ಟು ಮಂದಿ ಅಕ್ಷರಸ್ಥರು ಇತ್ಯಾದಿ ನೂರಾರು ಪ್ರಶ್ನೆಗಳಿಗೆ ಇಲ್ಲಿ ಉತ್ತರ ಸಿಕ್ಕುತ್ತದೆ. ಭಾರತ ಸರಕಾರದ Central Statistical Organisation ಹಾಗೂ ರಾಜ್ಯ ಸರಕಾರಗಳ Bureau of Economics and Statistics ಭಾರತ ಹಾಗೂ ರಾಜ್ಯಗಳಿಗೆ ಸಂಬಂಧ ಪಟ್ಟ ಅಂಕಿಅಂಶಗಳನ್ನು ನಿರಂತರವಾಗಿ ಪ್ರಕಟಿಸುತ್ತವೆ.

ವಿಶೇಷರೀತಿಯ ಪ್ರಕಟಣೆಗಳು

ಯಾವ ಗುಂಪಿಗೂ ಸೇರದ ಕೆಲವು ಉಪಯುಕ್ತ ಆಕರ ಗ್ರಂಥಗಳಿವೆ. ಉಮಾಪತಿಯುವರ 'ನುಡಿಮುತ್ತು' ಪ್ರಪಂಚಾದ್ಯಂತ ವಿಚಾರವಂತರೆಂದು ಖ್ಯಾತಿ ಪಡೆದವರ ನುಡಿಮುತ್ತುಗಳ ಸಂಗ್ರಹ. ಬಾರ್ಟ್ ಲೆಟ್ ಅವರ **Familiar Quotations** ಇದೇ ರೀತಿಯ ಇಂಗ್ಲಿಷ್‌ನ ನುಡಿ ಮುತ್ತುಗಳ ಸಂಗ್ರಹ. ಜೋಸಫ್‌ಕೇನರವರ **Famous First Facts** (ಪ್ರಖ್ಯಾತ ಪ್ರಥಮಾವಳಿ) ಮೊಟ್ಟಮೊದಲ ಎವರೆಸ್ಟ್ ಶಿಖರ ಹತ್ತಿದವನಾರು? ಬ್ರಿಟಿಷ್ ಕಡಲ್ಗಾಲುವೆ ದಾಟಿದವರು ಯಾರು? ಪ್ರಪಂಚದ ಪ್ರಥಮ ರೈಲು ಯಾವುದು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಒದಗಿಸಿದರೆ, ಕಳೆದ ವರ್ಷ ಅತ್ಯಂತ ವೇಗದಿಂದ ಓಡಿದವನಾರು? ಪ್ರಪಂಚದ ಅತಿದೊಡ್ಡ ಗಡ್ಡ ಯಾರಿಗಿದೆ? ಅತ್ಯಂತ ಕುಳ್ಳ ಮನುಷ್ಯನ ಎತ್ತರ ಎಷ್ಟು? ಮುಂತಾದ ನೂರಾರು ಪ್ರಶ್ನೆಗಳಿಗೆ ಉತ್ತರವನ್ನು **The Guiness Book of World Records** (ಗಿನೆಸ್‌ರ ಪ್ರಪಂಚ ವಿಕ್ರಮ ಸಾಧನೆಗಳ ಪುಸ್ತಕ) ಕೊಡುತ್ತದೆ. ದಿನ, ವಾರ, ತಿಥಿ, ಶುಭಕಾಲ, ರಾಹುಕಾಲ, ಮಳೆ, ಬೆಳೆ, ಹಬ್ಬ ಹರಿದಿನ, ರಜಾದಿನ, ಶಕುನ ಇತ್ಯಾದಿ ಅನೇಕ ವಿಷಯಗಳನ್ನು ವಾರ್ಷಿಕ ಪಂಚಾಂಗಗಳು ತಿಳಿಸುತ್ತವೆ. ಆಕರ ಗ್ರಂಥಗಳಲ್ಲಿ ಅವುಗಳ ಸ್ಥಾನ ವಿಶಿಷ್ಟವಾದದ್ದು.

ಕೆಲವು ಪ್ರಕಟಣೆಗಳು ಇಂದಿನ ವಿಚಾರಗಳಿಗೆ ಪ್ರಾಶಸ್ತ್ಯ ಕೊಡದೆ 'ನಿನ್ನೆ'ಯ ವಿಚಾರಗಳಿಗೆ ಮೀಸಲಾಗಿರುವುದುಂಟು. ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ಪ್ರದೇಶದ ಬೆಳವಣಿಗೆಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ಸಮಾಚಾರ ಮೂಲಗಳಿವೆ. ವಿಷ್ಯದ

ರಾಷ್ಟ್ರಗಳ ಪ್ರತಿ ವಾರದ ಪ್ರಮುಖ ಆಗುಹೋಗುಗಳನ್ನು Asian Recorder ಪ್ರಕಟಿಸುತ್ತದೆ. Keesings Contemporary Archives (ಕೀಸಿಂಗರ ಸಮಕಾಲೀನ ದಾಖಲೆಗಳು) ಬ್ರಿಟನ್, ಯೂರೋಪು ಹಾಗೂ ಕಾಮನ್‌ವೆಲ್ತ್ ರಾಷ್ಟ್ರಗಳ ಬೆಳವಣಿಗೆಗಳನ್ನು ತಿಳಿಸಿದರೆ, Facts on File ಅಮರಿಕೆಯ ಸುದ್ದಿಗಳಿಗೆ ಪ್ರಾಶಸ್ತ್ಯ ಕೊಡುತ್ತದೆ. ಪ್ರತಿ ದೇಶದ ಪತ್ರಿಕೆಗಳನ್ನು ಓದದೆಯೇ ನಾಲ್ಕಾರು ಪುಟಗಳ ಸಾಪ್ತಾಹಿಕ ಅವಲೋಕನದಿಂದ ಪ್ರಪಂಚದ ಪ್ರಮುಖ ಬೆಳವಣಿಗೆಗಳನ್ನು ತಿಳಿಯಲು ಇಂಥ ಪ್ರಕಟಣೆಗಳು ಸಹಾಯ ಮಾಡುತ್ತವೆ.

ವಾರ್ಷಿಕ ಪುಸ್ತಕಗಳು, ಡೈರೆಕ್ಟರಿಗಳು, ಕೈಪಿಡಿಗಳು ಮೊದಲಾದ ಸಮಾಚಾರ ಮೂಲಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸುವುದನ್ನು ಅಭ್ಯಾಸ ಮಾಡಿಕೊಂಡವನಿಗೆ ತಿಳಿಯಲಸಾಧ್ಯವಾದ ವಿಷಯ ಯಾವುದೂ ಇಲ್ಲ.

ಕೆಲವು ಪ್ರಮುಖ ವಾರ್ಷಿಕ ಪುಸ್ತಕ, ಡೈರೆಕ್ಟರಿ, ಕೈಪಿಡಿಗಳು

1. Statesmen's year book (ಸ್ಟೇಟ್ಸ್‌ಮನ್ ವಾರ್ಷಿಕ ಪುಸ್ತಕ), Newyork : St. Martin's Press, 1864.

   ಎಲ್ಲ ದೇಶಗಳ ಸರಕಾರಗಳ ವಿವರ, ರಾಜ್ಯಾಂಗ, ಆರ್ಥಿಕ ಸ್ಥಿತಿ, ವ್ಯವಸಾಯ, ವಾಣಿಜ್ಯ, ಸರಕಾರಿ ಪ್ರಮುಖರು, ರಾಯಭಾರಿಗಳು, ಪ್ರಮುಖ ಕಛೇರಿಗಳು ಇತ್ಯಾದಿಗಳನ್ನು ತಿಳಿಸುವ ವಾರ್ಷಿಕ ಪ್ರಕಟಣೆ.

2. Demographic year book. (ಜನಾಂಗ ಸ್ಥಿತಿ ವಿವರಣ ವಾರ್ಷಿಕ), Newyork: Unipub 1948.

   250 ಭೌಗೋಳಿಕ ಪ್ರದೇಶಗಳ ಜನ ಸಂಖ್ಯೆ, ಹುಟ್ಟು-ಸಾವು, ವಿವಾಹ, ವಿಚ್ಛೇದನಗಳಿಗೆ ಸಂಬಂಧಪಟ್ಟ ಅಂಕಿಅಂಶ ಉಳ್ಳದ್ದು.

3. Statistical year book (ಅಂಕಿಅಂಶಗಳ ವಾರ್ಷಿಕ), Newyork : UN Statistical Office, UNIPUB, 1949.

   ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳ ಬೆಳೆಗಳು, ಕೈಗಾರಿಕೋತ್ಪನ್ನಗಳು. ರಸ್ತೆಗಳು, ವ್ಯಾಪಾರ ವಾಣಿಜ್ಯೋದ್ಯಮಗಳಿಗೆ ಸಂಬಂಧಿಸಿದ ಅಂಕಿಅಂಶ ಒದಗಿಸುವ ಒಳ್ಳೆಯ ಪ್ರಕಟಣೆ.

4. Hand Book of Chemistry and Physics (ರಸಾಯನಶಾಸ್ತ್ರ. ಭೌತಶಾಸ್ತ್ರ ಕೈಪಿಡಿ), ವಿಜ್ಞಾನಿಗಳಿಗೂ, ವಿದ್ಯಾರ್ಥಿಗಳಿಗೂ ನಿತ್ಯೋಪಯೋಗಿ ಕೈಪಿಡಿ.

5. Magill, Frank N. Master - Plots, Newyork : Salem Press, 1949 8 Vols.

   ಇಂಗ್ಲಿಷ್ ಭಾಷೆಯ ನೂರಾರು ಲೇಖಕರ ಸಾವಿರಕ್ಕೂ

ಮೀರಿದ ಗ್ರಂಥಗಳ ವಿಮರ್ಶಾತ್ಮಕ ಕಥಾ ಸಾರಾಂಶ ಗಳನ್ನು ಕೊಡುತ್ತದೆ.

6. Pincode Directory

ಭಾರತ ಅಂಚೆ ಮತ್ತು ತಂತಿ ಇಲಾಖೆ ಪ್ರಕಸಿರುವ ಈ ಡೈರೆಕ್ಟರಿ ಪ್ರತಿ ಊರು, ನಗರದ ವಿವಿಧ ಭಾಗಗಳ ಪಿನ್ ಕೋಡ್ ಸಂಖ್ಯೆಗಳನ್ನು ಕೊಡುತ್ತದೆ.

7. Statistical Sources (ಅಂಕಿಅಂಶ ಸಮಾಚಾರ ಮೂಲಗಳು), Detroit; Gala Research Co., 1971.

ಅಂಕಿಅಂಶಗಳ 11 ಸಾವಿರಕ್ಕೂ ಹೆಚ್ಚಿನ ಸಮಾಚಾರ ಮೂಲಗಳ ವಿವರಣಾತ್ಮಕ ಸೂಚಿ.

8. Wint, Guy ed., Asia : A Hand Book (ಏಷ್ಯಾ : ಒಂದು ಕೈಪಿಡಿ), London : Blond, 1965.

ಏಷ್ಯ ರಾಷ್ಟ್ರಗಳ ರಾಜಕೀಯ. ಸಾಮಾಜಿಕ. ಆರ್ಥಿಕ. ಸಾಂಸ್ಕೃತಿಕ ಹಿನ್ನೆಲೆ ಲೇಖನಗಳು. ಅಂಕಿಅಂಶಗಳನ್ನು ಕೊಡುವ ಉತ್ತಮ ವಿಚಾರ ಮೂಲ.

9. Awards, Honors, and Prizes: A Source Book and Directory (ಪಾರಿತೋಷಕಗಳ ಕೈಪಿಡಿ), 2 ded., Detroit; Gale Research Co., 1972.

2 ಸಾವಿರಕ್ಕೂ ಹೆಚ್ಚಿನ ಅಮೆರಿಕ್ನ ಸಂಸ್ಥೆಗಳ ವಿವರ, ಖ್ಯಾತ ಅಂತರ್ರಾಷ್ಟ್ರೀಯ ಪಾರಿತೋಷಕಗಳ ವಿವರ ಕೊಡುತ್ತದೆ.

10. Butler, Audrey, Everyman's Dictionary of Dates (ಪ್ರಮುಖ ತಾರೀಖುಗಳ ಕೋಶ), 6 th ed., New york : E. P. Dutton & Co., 1971.

ಪ್ರಪಂಚದ ಪ್ರಮುಖ ಘಟನೆಗಳ ಇಸವಿಗಳನ್ನು ತಿಳಿಸುತ್ತದೆ.

ವ್ಯಕ್ತಿ ಪರಿಚಯ ಸಮಾಚಾರ ಮೂಲಗಳು

ವ್ಯಕ್ತಿಗಳ ಜೀವನದ ಕತೆಯೇ ಜೀವನ ಚರಿತ್ರೆ. ಅದು ವ್ಯಕ್ತಿಗೂ ಅವನ ಕಾಲಕ್ಕೂ ಇರುವ ಸಂಬಂಧವನ್ನು ಸೂಚಿಸಿ ಚರಿತ್ರೆಯ ಅಂಶ ಹೊಂದಿರುತ್ತದೆ. ವ್ಯಕ್ತಿಯ ಪಾತ್ರನಿರೂಪಣೆ. ಚಿತ್ರಣ ಅದರ ಇನ್ನೊಂದು ಗುಣ. ಜೀವನ ಚರಿತ್ರೆ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲೊಂದು. ಜ್ಞಾನಾಭಿವೃದ್ಧಿ, ವಾಚನ ರಂಜನೆಗಳೆರಡೂ ಅದರಿಂದ ಲಭಿಸುತ್ತವೆ. ನಮಗೆ ಅರಿವಿಲ್ಲ ದಂತೆಯೇ ಜೀವನ ಚರಿತ್ರೆ ನಮ್ಮ ವ್ಯಕ್ತಿತ್ವ ಬದಲಿಸುವ ಶಕ್ತಿ ಹೊಂದಿದೆ. ಮನುಷ್ಯನ ಜೀವನದಷ್ಟೆ ಅಪಾರ ವಿಸ್ತಾರ, ವೈವಿಧ್ಯತೆ ಜೀವನ ಚರಿತ್ರೆಯದು. ಪುಸ್ತಕಾಲಯದ ಕ್ಯಾಟ ಲಾಗುಗಗಳ ಸಹಾಯದಿಂದಲೋ, ಜೀವನ ಚರಿತ್ರೆಗಳ ಸೂಚಿ ಗಳ ಸಹಾಯದಿಂದಲೋ ನಮಗೆ ಬೇಕಾದ ವ್ಯಕ್ತಿಯ ಜೀವನ ಚರಿತ್ರೆಯನ್ನು ಗುರುತಿಸಿ. ಪಡೆಯಬಹುದು.

ಅನೇಕ ವೇಳೆ ನೂರಾರು ಪುಟಗಳ ಜೀವನ ಚರಿತ್ರೆಯಲ್ಲಿ ನಮಗೆ ಆಸಕ್ತಿ ಇಲ್ಲದಿರಬಹುದು. ವ್ಯಕ್ತಿಯ ಜೀವನದ ಪ್ರಮುಖ ಘಟನೆಯೊಂದರ ವಿವರವೋ. ಅವನು ಹುಟ್ಟಿದ ಅಥವ ಸತ್ತ ತಾರೀಖೋ, ಅವನ ಬಂಧು ಮಿತ್ರರ ಅಲ್ಪ ವಿಚಾರವೋ. ಅವನು ಯಾವ ಶಾಲೆಯಲ್ಲಿ ಓದಿದ ಎಂಬ ಅಂಶವೋ. ಅವನ ಪ್ರಮುಖ ಸಾಧನೆಯ ಸಂಕ್ಷಿಪ್ತ ವಿವರ ಮಾತ್ರವೋ ನಮಗೆ ಬೇಕಾಗಿರಬಹುದು. ಇಂಥ ಪ್ರಸಂಗ ಗಳಲ್ಲಿ ದೀರ್ಘವಾದ ಜೀವನ ಚರಿತ್ರೆಗಿಂತ ಸಾವಿರಾರು ಪುಟಗಳ

ವ್ಯಕ್ತಿ ಪರಿಚಯ ಲೇಖನ ಹೆಚ್ಚು ಉಪಯುಕ್ತವಾಗಬಹುದು. ಕೆಲವು ಸಲ ವ್ಯಕ್ತಿಯನ್ನು ಕುರಿತ ನಾಲ್ಕು ಸಾಲಿನ ಅಂಕಿಅಂಶ ಅಷ್ಟೇ ನಮಗೆ ಸಾಕಾಗಬಹುದು. ಅಷ್ಟೇ ಅಲ್ಲದೆ ನಮ್ಮ ಆಸಕ್ತಿ ಇರುವ ವ್ಯಕ್ತಿಗಳ ಸಂಪೂರ್ಣ ಜೀವನ ಚರಿತ್ರೆ ಇಲ್ಲದೆಯೂ ಇರಬಹುದು. ವ್ಯಕ್ತಿ ಪರಿಚಯ, ಚಿತ್ರಣಗಳ ವಿಷಯ ಮೂಲಗಳು ಅನೇಕವಿದ್ದು, ಕೆಲವನ್ನು ಇಲ್ಲಿ ವಿವರಿಸ ಲಾಗಿದೆ.

ಪುಸ್ತಕಾಲಯಗಳಲ್ಲಿರುವ ಹಲವು ವ್ಯಕ್ತಿಚಿತ್ರ ಆಕರ ಗ್ರಂಥಗಳು ವ್ಯಕ್ತಿಯನ್ನು ಕುರಿತ ನಾಲ್ಕಾರು ಪುಟಗಳ ಪರಿ ಚಯಾತ್ಮಕ ವಿವರಣೆ ಕೊಡಬಹುದು ; ಕೆಲವು ನಾಲ್ಕಾರು ಪಂಕ್ತಿಗಳಷ್ಟೇ ವಿಚಾರ ಒದಗಿಸಬಹುದು. ಮತ್ತೆ ಕೆಲವು ವ್ಯಕ್ತಿ ಪರಿಚಯಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಕೊಡ ಬಹುದು. ಇನ್ನು ಹಲವು ಕೇವಲ ಅಂಕಿಅಂಶ ಕೊಡ ಬಹುದು : ಗುಣವರ್ಣನೆ ಮಾಡದೆ ವ್ಯಕ್ತಿಯ ಸಾಧನೆ ಮಹತ್ವ ಕುರಿತು ಏನನ್ನೂ ಹೇಳದೆ ಇರಬಹುದು. ಹಲವು ವಿಚಾರ ಮೂಲಗಳು ಪ್ರಾಮಾಣಿಕತೆಗೂ, ಖಚಿತ ವಿಷಯ ಪ್ರತಿಪಾದ ನೆಗೂ ಹೆಸರಾಗಿದ್ದರೆ, ಕೆಲವು ಹೊಗಳುಭಟ್ಟ ಮನೋಧರ್ಮ ದಿಂದಲೇ ಕಾರ್ಯ ಮಾಡಬಹುದು. ಜೀವನ ಚರಿತ್ರೆ ಮೂಲ ಗಳನ್ನು ವಿವೇಚನೆಯಿಂದ ಉಪಯೋಗಿಸಲು ಅಂಥ ಮೂಲ ಗಳ ಕಾರ್ಯ ವ್ಯಾಪ್ತಿ. ಮನೋಧರ್ಮಗಳನ್ನು ತಿಳಿದು ಕೊಂಡಿ ದ್ದರೆ ಅನುಕೂಲ. ಪ್ರತಿ ವರ್ಷ ಎರಡು ಸಾವಿರಕ್ಕೂ ಹೆಚ್ಚು ಹೆಚ್ಚು ಸಂಖ್ಯೆಯ ವ್ಯಕ್ತಿಚಿತ್ರಗಳಿಗೆ ಸಂಬಂಧ ಪಟ್ಟ ಆಕರ ಗ್ರಂಥಗಳು ಇಂಗ್ಲಿಷ್ ಭಾಷೆಯೊಂದರಲ್ಲಿಯೇ ಪ್ರಕಟವಾಗು ವುದನ್ನು ಗಮನಿಸಿದಾಗ ನಮಗೆ ಬೇಕಾದ ವ್ಯಕ್ತಿ ವಿಚಾರ

ತಿಳಿಯಲು ಅಂಥ ವಿಚಾರ ಮೂಲಗಳ ತಿಳುವಳಿಕೆಯು ಅಗತ್ಯ ಮನವರಿಕೆ ಆಗುತ್ತದೆ.

ಜೀವನ ಚರಿತ್ರೆ, ವ್ಯಕ್ತಿ ಪರಿಚಯುಗಳ ಕೆಲವು ಸಮಾಚಾರ ಮೂಲಗಳಲ್ಲಿ ಸಂಬಂಧ ಪಟ್ಟ ವ್ಯಕ್ತಿಯ ಭಾವ ಚಿತ್ರ ಇರುತ್ತದೆ. ಜೀವನ ಚಿತ್ರದ ನಾಯಕ ಲೇಖಕನಾದಲ್ಲಿ ಅವನ ಗ್ರಂಥ-ಲೇಖನಗಳ ಪಟ್ಟಿ, ಅವನ ಕೃತಿಗಳ ಬಗ್ಗೆ ಇರುವ ಇತರ ಗ್ರಂಥ ಹಾಗೂ ಲೇಖನಗಳ ಪಟ್ಟಿ, ಕೆಲವು ಆಕರ ಗ್ರಂಥಗಳಲ್ಲಿರುವುದುಂಟು. ಅವುಗಳ ಉಪಯೋಗದಿಂದ ನಮಗೆ ಬೇಕಾದ ವ್ಯಕ್ತಿಯ ಜೀವನ, ಸಾಧನೆ ಕುರಿತು ಹೆಚ್ಚಿನ ವ್ಯಾಸಂಗ ಮಾಡಲು ಅನುಕೂಲ ಆಗುತ್ತದೆ. ವ್ಯಕ್ತಿ ಚಿತ್ರಗಳು ಅಕಾರಾದಿ ಅಕ್ಷರ ಮಾಲೆಗನುಗುಣವಾಗಿಯೋ ವ್ಯಕ್ತಿಗಳ ಜೀವಿತ ಕಾಲ ಅನುಸರಿಸಿಯೋ ವ್ಯವಸ್ಥಿತವಾಗಿದ್ದು ಈ ವ್ಯವಸ್ಥೆಯ ಅರಿವು ಅವನ್ನು ಉಪಯೋಗಿಸಲು ಸಹಕಾರಿ. ವ್ಯಕ್ತಿ ಪರಿಚಯ ಮೂಲಗಳು ಅನೇಕವಿದ್ದು ಪ್ರಮುಖವಾದ ಹಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

ವಿಶ್ವಕೋಶಗಳು

ಜೀವನದ ನಾನಾರಂಗಗಗಳ ಪ್ರಮುಖ ವ್ಯಕ್ತಿಗಳ ಸಂಕ್ಷಿಪ್ತ ಜೀವನ ಚಿತ್ರವನ್ನು ವಿಶ್ವಕೋಶಗಳು ಕೊಡುತ್ತವೆ. 'ವಿಶೇಷ' ವಿಶ್ವಕೋಶಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಪಟ್ಟ ಖ್ಯಾತನಾಮರ ವ್ಯಕ್ತಿಚಿತ್ರ ನಿರೀಕ್ಷಿಸಬಹುದು. ಭಾರತದ ತತ್ತ್ವಶಾಸ್ತ್ರಜ್ಞ ಡಾ॥ ಎಸ್. ರಾಧಾಕೃಷ್ಣರವರ ವ್ಯಕ್ತಿಚಿತ್ರವನ್ನು ತತ್ವಶಾಸ್ತ್ರ ವಿಶ್ವಕೋಶ (Encyclopaedia of Philosophy) ನಲ್ಲಿ ನೋಡಬಹುದು.

ಶಬ್ದಕೋಶಗಳು

ಅನೇಕ ಶಬ್ದಕೋಶಗಳು ಖ್ಯಾತ ವ್ಯಕ್ತಿಗಳ ಹೆಸರನ್ನು ಕೊಟ್ಟು ನಾಲ್ಕಾರು ಸಾಲುಗಳ ಪ್ರಮುಖಾಂಶಗಳನ್ನು ಕೊಡುತ್ತವೆ. ವ್ಯಕ್ತಿ ವಿಚಾರ ತಿಳಿಯಲು ಹಲವು ವೇಳೆ ಶಬ್ದಕೋಶಗಳನ್ನೂ ಉಪಯೋಗಿಸಬಹುದು. ಅಲ್ಲದೆ ವ್ಯಕ್ತಿಪರಿಚಯಕ್ಕೇ ಮೀಸಲಾದ Chamber's Biographical Dictionary (ಛೇಂಬರ್ಸ್ ಜೀವನ ಚಿತ್ರ ಶಬ್ದಕೋಶ)ಗಳೂ ಇವೆ.

ಡೈರೆಕ್ಟರಿಗಳು

ಪ್ರತಿ ವರ್ಷ ಅಥವ ಎರಡು ವರ್ಷಕ್ಕೊಮ್ಮೆ ಪ್ರಕಟವಾಗುವ ಡೈರೆಕ್ಟರಿಗಳು ವ್ಯಕ್ತಿಗಳನ್ನು ಕುರಿತ ಮಾಹಿತಿ ಒದಗಿಸುತ್ತವೆ. ಸಮಕಾಲೀನರ ವಿಚಾರ ತಿಳಿಯಲು ಡೈರೆಕ್ಟರಿ ಒಳ್ಳೆಯ ಸುದ್ದಿಮೂಲ. Hindustan Directory & Who's Who ತನ್ನ ಹೆಸರಿನಲ್ಲಿಯೇ ಈ ಅಂಶವನ್ನು ಸೂಚಿಸುತ್ತದೆ.

ಸಾಹಿತ್ಯ ಕೈಪಿಡಿಗಳು

ಅನೇಕ ಭಾಷಾ ಸಾಹಿತ್ಯಗಳ ಕೈಪಿಡಿಗಳು ಸಾಮಾನ್ಯವಾಗಿ ಆಯಾ ಸಾಹಿತ್ಯದ ಹಾಗೂ ಸಾಹಿತಿಗಳ ಪರಿಚಯ ಮಾಡಿಕೊಡುತ್ತವೆ. European Authors (ಯೂರೋಪಿನ ಗ್ರಂಥಕರ್ತರು) ಯೂರೋಪ್ ರಾಷ್ಟ್ರಗಳ ಲೇಖಕರ ಪರಿಚಯ ಮಾಡಿಕೊಡುತ್ತದೆ. ಇದು ಇಂಥ ಒಂದು ಉದಾಹರಣೆ.

ಪತ್ರಿಕೆಗಳು - ನಿಯತಕಾಲಿಕಗಳು

ದಿನ, ವಾರ ಪತ್ರಿಕೆಗಳಲ್ಲೂ, ನಿಯತಕಾಲಿಕಗಳಲ್ಲೂ ವ್ಯಕ್ತಿ ಪರಿಚಯ ಲೇಖನಗಳು ನಿರಂತರವಾಗಿ ಪ್ರಕಟವಾಗುತ್ತಿರುತ್ತವೆ. ಅವು ಚಾರಿತ್ರಿಕ ವ್ಯಕ್ತಿಗಳನ್ನು ಕುರಿತದ್ದೋ ಸಮಕಾಲೀನರನ್ನು ಕುರಿತದ್ದೋ ಇರಬಹುದು. ಇಂಥ ಮೂಲಗಳಲ್ಲಿ ಪ್ರಕಟವಾಗುವ ವ್ಯಕ್ತಿ ಪರಿಚಯ ಲೇಖನಗಳನ್ನು ಅರಿಸುವ ಕೆಲಸ ಸುಲಭ ಆಗಲೆಂದೇ ವ್ಯಕ್ತಿ ಪರಿಚಯ ಲೇಖನ ಸೂಚಿಗಳು ಪ್ರಕಟವಾಗುತ್ತಿದ್ದು ಅವುಗಳ ಉಪಯೋಗದ ಅರಿವು ಎಲ್ಲರಿಗೂ ಅವಶ್ಯಕ. ಅಮೆರಿಕೆಯ ವಿಲ್ಸನ್ ಕಂಪನಿ ಪ್ರಕಟಿಸುವ Biography Index (ಜೀವನ ಚರಿತ್ರೆ, ವ್ಯಕ್ತಿಚಿತ್ರ ಸೂಚಿ) ಇಂಥ ಒಂದು ನಿಯತಕಾಲಿಕ. ನ್ಯೂಯಾರ್ಕ್‌ಟೈಂಸ್‌ನಂತಹ ಬೃಹತ್ ದಿನಪತ್ರಿಕೆಯಲ್ಲಿ ಅನೇಕ ವ್ಯಕ್ತಿ ಚಿತ್ರಗಳು ಪ್ರಕಟವಾಗುತ್ತಿದ್ದು ಅದರ ಸೂಚಿ ಸಹ ಇದೆ. Current Biography ಸಮಕಾಲೀನ ವ್ಯಕ್ತಿಪರಿಚಯಗಳನ್ನು ಭಾವಚಿತ್ರ ಸಹಿತ ಪ್ರಕಟಿಸುವ ನಿಯತಕಾಲಿಕ. ಹತ್ತಾರು ವರ್ಷಗಳ ಈ ನಿಯತಕಾಲಿಕದ ಸಂಯೋಜಿತ ಸೂಚಿ (Cumulative Index) ಇದ್ದು ನಮ್ಮ ಹುಡುಕುವಿಕೆಗೆ ಸಹಕಾರಿ.

ರಾಷ್ಟ್ರೀಯ ವ್ಯಕ್ತಿಪರಿಚಯ ಸಂಕಲನಗಳು

ಅನೇಕ ದೇಶಗಳು ತಮ್ಮ ತಮ್ಮ ದೇಶದ ಗಣ್ಯರ ಪರಿಚಯಾತ್ಮಕ ಲೇಖನ ಸಂಕಲನಗಳನ್ನು ಪ್ರಕಟಿಸುತ್ತವೆ. Dictionary of American Biography ಅಮೆರಿಕೆಯ ಗತಿಸಿದ ಗಣ್ಯ ವ್ಯಕ್ತಿಗಳ ಸುದೀರ್ಘವಾ. ಭಾವಚಿತ್ರ

ಸಹಿತವೂ ಆದ ಲೇಖನಗಳನ್ನು ಅಧಿಕೃತ ರೀತಿಯಲ್ಲಿ ಒದಗಿಸುತ್ತದೆ. British National Biography (ಬ್ರಿಟಿಷ್ ರಾಷ್ಟ್ರೀಯ ಜೀವನ ಚರಿತ್ರೆ) ಗತಿಸಿದ ಬ್ರಿಟಿಷ್ ಗಣ್ಯ ವ್ಯಕ್ತಿಗಳ ಜೀವನ ಚರಿತ್ರೆಯ ಅತ್ಯುತ್ತಮ ಸಮಾಚಾರ ಮೂಲ. ನೂರಾರು ಮಂದಿಯ ಜೀವನ, ಸಾಧನೆಗಳ ಪರಿಚಯ ಮಾಡಿಕೊಡುವ ಇಂಥ ಪ್ರಕಟಣೆಗಳು ಸಹಜವಾಗಿಯೇ ಅನೇಕ ಮಂದಿ ವಿದ್ವಾಂಸರ ಶ್ರಮದಫಲ. ಬೃಹತ್ ವಿಸ್ತಾರದಿಂದಾಗಿ ಇವು ಹಲವು ಸಂಪುಟಗಳಲ್ಲಿರುತ್ತವೆ.

ವ್ಯಕ್ತಿ ಪರಿಚಯ ಮಾಡಿಕೊಡುವ ಹಲವು ಆಕರ ಗ್ರಂಥಗಳು ಜೀವನದ ಎಲ್ಲ ರಂಗಗಳ ಪ್ರಮುಖರನ್ನು ಒಳಗೊಂಡಿರದೆ ಯಾವುದಾದರೊಂದು ವಿಶಿಷ್ಟ ವರ್ಗದ ವ್ಯಕ್ತಿಗಳ ಪರಿಚಯ ಮಾಡಿಕೊಡುತ್ತವೆ. Dictionary of Scientific Biography (ವಿಜ್ಞಾನಿಗಳ ವ್ಯಕ್ತಿಪರಿಚಯ ಶಬ್ದಕೋಶ) ಹೆಸರೇ ಸೂಚಿಸುವಂತೆ ಖ್ಯಾತ ವಿಜ್ಞಾನಿಗಳ ಪರಿಚಯ ಮಾಡಿಕೊಟ್ಟರೆ, who's who of Indian Martyres ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣ ಕೊಟ್ಟ ಹುತಾತ್ಮರ ವ್ಯಕ್ತಿ ಪರಿಚಯ ಒದಗಿಸುತ್ತದೆ. The Encyclopaedia of World Biography (ಪ್ರಪಂಚ ವ್ಯಕ್ತಿಪರಿಚಯ ವಿಶ್ವಕೋಶ) ಪ್ರಪಂಚಾದ್ಯಂತ ಇರುವ ಗಣ್ಯರ ಜೀವನ-ಸಾಧನೆ ಪರಿಚಯ ಒದಗಿಸುವ ದುಸ್ಸಾಹಸಮಾಡುತ್ತದೆ. ನಾಲ್ಕು ಸಾಲಿನ ಅಂಕಿಅಂಶ ಒದಗಿಸುವ International Who's who ಸಹ ಇದೆ. ಅಂತರಾಷ್ಟ್ರೀಯ ಖ್ಯಾತಿ ಪಡೆದ ಸಮಕಾಲೀನರ ವ್ಯಕ್ತಿಚಿತ್ರಗಳು ಇದರ ವೈಶಿಷ್ಟ್ಯ.

ಯಾರ ಜೀವನದ ವಿಚಾರ ನಮಗೆಬೇಕು ? ಆ ವ್ಯಕ್ತಿ ಯಾವ ರಾಷ್ಟ್ರದವನು ? ಅವನ ಸಾಧನೆಯು ಕ್ಷೇತ್ರ ಯಾವುದು ? ಗತಕಾಲದವನೋ, ಸಮಕಾಲೀನನೋ ? ನಮಗೆ ದೀರ್ಘ ಜೀವನ ಚರಿತ್ರೆ ಬೇಕೋ, ನಾಲ್ಕಾರು ಪುಟಗಳ ಪುಟ್ಟ ಲೇಖನ ಅವಶ್ಯಕವೋ, ಭಾವಚಿತ್ರ ಇರಬೇಕೋ, ನಾಲ್ಕು ಸಾಲಿನ ಅಂಕಿಅಂಶ ಅಷ್ಟೇ ಸಾಕೋ ? ವ್ಯಕ್ತಿ ಗಂಡಸೋ, ಹೆಂಗಸೋ ಎಂಬ ಅಂಶಗಳ ಆಧಾರದಿಂದ ಸೂಕ್ತವಾದ ಆಕರಗ್ರಂಥದ ಸಹಾಯ ಪಡೆದು ನಮಗೆ ಬೇಕಾದ ವ್ಯಕ್ತಿ ವಿಚಾರವನ್ನು ಸುಲಭವಾಗಿ ತಿಳಿಯಬಹುದು. ಇಂಥ ಶಕ್ತಿಯನ್ನು ಗಳಿಸಿದವನಿಗೆ ಪ್ರಪಂಚದ ಗಣ್ಯರೆಲ್ಲರೂ ಪರಿಚಿತರೇ.

ಕೆಲವು ಪ್ರಮುಖ ವ್ಯಕ್ತಿಪರಿಚಯ ಸಮಾಚಾರ ಮೂಲಗಳು

1. Dictionary of National Biography (ರಾಷ್ಟ್ರೀಯ ಜೀವನ ಚರಿತ್ರೆ ಶಬ್ದಕೋಶ.)

   London : Oxford University Press, 1938, 21 Vols. Supplements

   ಬ್ರಿಟಿಷ್ ಗಣ್ಯರ ಸುದೀರ್ಘ ವ್ಯಕ್ತಿಪರಿಚಯ ಲೇಖನಗಳ ಸಂಗ್ರಹ. 30 ಸಾವಿರಕ್ಕೂ ಮೀರಿದ ಲೇಖನಗಳುಳ್ಳ ಇದು ಇಂಥ ಗ್ರಂಥಗಳಲ್ಲಿ ಮೇರುಕೃತಿ.

2. Dictionary of American Biography (ಅಮೆರಿಕ ಜೀವನ ಶಬ್ದಕೋಶ.)

New York : Charles Scribner's, 1964, 11 Vols.

15 ಸಾವಿರಕ್ಕೂ ಹೆಚ್ಚು ಮಂದಿ ಗಣ್ಯ ಅಮೆರಿಕನರ ಪರಿಚಯಾತ್ಮಕ ಸುದೀರ್ಘ ಲೇಖನಗಳನ್ನೊಳಗೊಂಡಿರುವ ಈ ಗ್ರಂಥ 3 ಸಾವಿರಕ್ಕೂ ಹೆಚ್ಚಿನ ಪಂಡಿತರ ಶ್ರಮದ ಫಲ.

3. Chamber's Biographical Dictionary (ಛೇಂಬರ್ಸ್ ವ್ಯಕ್ತಿ ಪರಿಚಯ ಶಬ್ದಕೋಶ.)
London : Chamber's Ltd., 1960. 1432 P.

15 ಸಾವಿರಕ್ಕೂ ಹೆಚ್ಚಿನ ವ್ಯಕ್ತಿಚಿತ್ರಗಳಿವೆ. ಶೇ. 80 ರಷ್ಟು ಗತಿಸಿದವರ ಜೀವನ ಚಿತ್ರಗಳು. ಯೂರೋಪಿಯರ್ ಹಾಗೂ ಬ್ರಿಟಿಷ್ ವ್ಯಕ್ತಿಗಳಿಗೆ ಪ್ರಾಶಸ್ತ್ಯ.

4. Biography Index (ಜೀವನ ಚರಿತ್ರೆ ಸೂಚಿ.)
New York : The H. W. Wilson Co, 1947.

1900 ನಿಯತಕಾಲಿಕಗಳಲ್ಲಿ ಪ್ರಕಟವಾಗುವ ವ್ಯಕ್ತಿ ಪರಿಚಯ, ಜೀವನ ಚರಿತ್ರೆಗಳ ಸೂಚಿ.

5. Current Biography (ಸಮಕಾಲೀನ ಜೀವನ ಚರಿತ್ರೆ.)

New York : H. W. Wilson Co., 1940.

ಸಮಕಾಲೀನ ಗಣ್ಯರ ವ್ಯಕ್ತಿಪರಿಚಯ ಲೇಖನಗಳ ಸೂಚಿ. ಪ್ರತಿ ವರ್ಷ 300-350 ಅಂತರ್ರಾಷ್ಟ್ರೀಯ ವ್ಯಕ್ತಿಗಳ ಪರಿಚಯ ಲೇಖನಗಳುಂಟು.

6. The McGraw Hill Encyclopaedia of World Biography (ಮೆಗ್ರಾಹಿಲ್ ಪ್ರಪಂಚ ಜೀವನ ಚರಿತ್ರೆ ವಿಶ್ವಕೋಶ.)
New York : McGra Hill Co., 1972, 12 Vols.

ಪ್ರಪಂಚದ ಗತಿಸಿದ ಗಣ್ಯವ್ಯಕ್ತಿಗಳ ಪರಿಚಯ ಲೇಖನಗಳ ಸಂಕಲನ. 800 ಪದಗಳ ಪ್ರತಿ ಲೇಖನ ವ್ಯಕ್ತಿಯ ಸಾಧನೆಯ ವಿಮರ್ಶೆ ಒಳಗೊಂಡಿದ್ದು ಅನೇಕ ಮಂದಿ ಪರಿಣತರ ಶ್ರಮದ ಫಲ. ಸಾವಿರಾರು ಚಿತ್ರಗಳು, ಭೂಪಟಗಳೂ ಉಂಟು. ವ್ಯಾಸಂಗಕ್ಕೆ ಸಹಕಾರಿ ಆದ ಪುಸ್ತಕ ಸೂಚಿಗಳುಂಟು.

ಭೌಗೋಳಿಕ ಸಮಾಚಾರಮೂಲಗಳು

ಭೌಗೋಳಿಕ ವಿಚಾರಗಳಲ್ಲಿ ಎಲ್ಲರಿಗೂ ಆಸಕ್ತಿ ಉಂಟು. ಟೋಕಿಯೋ ಎಲ್ಲಿದೆ? ಮಲಯೇಷಿಯದ ಜನಸಂಖ್ಯೆ ಎಷ್ಟು? ಬೊಂಬಾಯಿಂದ ಬೆಂಗಳೂರಿಗೆ ಎಷ್ಟು ದೂರ? ಪಾಕೀಸ್ತಾನದ ಮುಖ್ಯ ಬೆಳೆಗಳು ಯಾವುವು? ಬಾಂಗ್ಲಾ ದೇಶದಲ್ಲಿ ಯಾವ ಖನಿಜಗಳು ದೊರೆಯುತ್ತವೆ? ಕಾವೇರಿ ನದಿ ಯಾವ ಯಾವ ರಾಜ್ಯಗಳಲ್ಲಿ ಹರಿಯುತ್ತದೆ? ಬೆಂಗಳೂರಿಂದ ಮಂಗಳೂರಿಗೆ ರೈಲು ಇದೆಯೇ? ಗವಂ ದ್ವೀಪ ಅಟ್ಲಾಂಟಿಕ್ ಸಾಗರದಲ್ಲಿದೆಯೋ, ಫೆಸಿಫಿಕ್ ಸಾಗರ ದಲ್ಲಿದೆಯೋ? ನೈಜೀರಿಯಕ್ಕೆ ಸಮುದ್ರ ತೀರ ಉಂಟೇ? ಮುಂತಾದ ಅನೇಕ ಪ್ರಶ್ನೆಗಳಿಗೆ ಭೌಗೋಳಿಕ ಆಕರ ಗ್ರಂಥಗಳು ಉತ್ತರ ಕೊಡುತ್ತವೆ. ಇಂಥ ಪ್ರಮುಖ ಸಮಾಚಾರಮೂಲ ಗಳು, ಭೂಪಟಗಳು, ಗೆಜೆಟಿಯರುಗಳು ಹಾಗೂ ಪ್ರಯಾಣಿ ಕರ ಕೈಪಿಡಿಗಳು.

ಭೂಪಟಗಳು

ಭೌಗೋಳಿಕ ವಿಚಾರಮೂಲಗಳಲ್ಲಿ ಭೂಪಟಗಳಿಗೆ ಅಗ್ರಸ್ಥಾನ ಸಲ್ಲುತ್ತದೆ. ಪ್ರಾಯಶಃ ನಾವೆಲ್ಲರೂ ಒಂದಲ್ಲ ಒಂದು ಬಾರಿ ಭೂಪಟ ಉಪಯೋಗಿಸಿದ್ದೇವೆ ಅಥವಾ ನೋಡಿ ದ್ದೇವೆ. ಭೂಪಟಗಳಲ್ಲಿ ಹಲವು ವಿಧಗಳುಂಟು. ಗೋಡೆಗೆ ತಗುಲಿ ಹಾಕುವ ಭೂಪಟ, ಪುಸ್ತಕ ರೂಪದಲ್ಲಿರುವ ಭೂಪಟ,

ಭೂಗೋಳ ಗ್ರಂಥಗಳಲ್ಲಿರುವ ಭೂಪಟಗಳು: ಒಂದು ಊರಿನ, ತಾಲ್ಲೂಕಿನ, ರಾಜ್ಯದ, ದೇಶದ ಅಥವ ಪ್ರಪಂಚದ ಭೂಪಟ; ಚಂದ್ರಗ್ರಹ, ಸೌರವ್ಯೂಹ ಇತ್ಯಾದಿಗಳ ಭೂಪಟ ಹೀಗೆ ಅವುಗಳ ವೈವಿಧ್ಯತೆ ಅಪಾರ. ರಾಜಕೀಯ ಭೂಪಟಗಳು ರಾಜ್ಯ, ರಾಷ್ಟ್ರ ಇತ್ಯಾದಿಗಳ ವಿಸ್ತೀರ್ಣ, ಗಡಿಗಳನ್ನು ತೋರಿಸುತ್ತವೆ. ಕೆಲವು ಭೂಪಟಗಳು ದೇಶದ ರಸ್ತೆ ಮಾರ್ಗ, ರೈಲು ಮಾರ್ಗ, ವಿಮಾನ ಮಾರ್ಗ ಇತ್ಯಾದಿ ಸಂಚಾರ ವ್ಯವಸ್ಥೆಗಳನ್ನು ವಿವರಿಸುತ್ತವೆ. ಮಳೆ, ಬೆಳೆ, ಖನಿಜ ಸಂಪತ್ತು, ಮೇಲ್ಮೈ ಲಕ್ಷಣಗಳು, ಜನಸಾಂದ್ರತೆ, ನದಿಗಳು, ಪರ್ವತಗಳು ಮುಂತಾದ ಅನೇಕ ವಿಧದ ವಿಚಾರಗಳನ್ನು ತಿಳಿಸುವ ವಿಶೇಷ ಭೂಪಟಗಳು ಇರುತ್ತವೆ. ಚಾರಿತ್ರಿಕ ಭೂಪಟಗಳು ಅಶೋಕ ಅಥವ ಅಕ್ಬರನ ರಾಜ್ಯವಿಸ್ತಾರಗಳನ್ನೋ, ರೋಮನ್ ಚಕ್ರಾಧಿಪತ್ಯವನ್ನೋ ತೋರಿಸುತ್ತವೆ. ನಮ್ಮ ತಿಳಿವಿಗನುಸಾರವಾಗಿ ನಾವು ಭೂಪಟಗಳಿಂದ ಅನೇಕ ವಿಧವಾದ ಉಪಯುಕ್ತ ಮಾಹಿತಿ ಪಡೆಯಬಹುದು. ಭೂಪಟಗಳ ಉಪಯೋಗವನ್ನು ತಕ್ಕಮಟ್ಟಿಗಾದರೂ ತಿಳಿಯದವನು ಜ್ಞಾನಲೋಕದ ಒಕ್ಕಣ್ಣನೇ ಸರಿ.

ನಮ್ಮ ನಂಬಿಕೆಗೆ ಅರ್ಹವಾಗಿರಲು ಭೂಪಟಗಳು ಕರಾರುವಾಕ್ಕಾಗಿರಬೇಕು. ಉಪಯೋಗಿಸಲು ಸುಲಭವಾಗುವಂತಿದ್ದು, ವರ್ಣಮಯವೂ ಆಕರ್ಷಕವೂ ಆಗಿರಬೇಕು. ಜನರ ಅನುಕೂಲಕ್ಕೆ ತಕ್ಕ ಅಳತೆಯಲ್ಲಿ ನಿರ್ಮಿತವಾಗಿರಬೇಕು. ವಿವಿಧ ಅಂಶಗಳನ್ನು ಸೂಚಿಸುವ ಸಂಕೇತಗಳು ಸ್ಪಷ್ಟವೂ, ಆಕರ್ಷಕವೂ ಆಗಿರಬೇಕು. ಭೂಪಟಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡುವುದನ್ನು ಅಭ್ಯಾಸ ಮಾಡಿಕೊಳ್ಳುವುದರಿಂದ,

ಭೂಪಟ ಪ್ರಕಾಶಕರು ಭೂಪಟ ನಿರ್ಮಾಣದಲ್ಲಿ ಸಾಕಷ್ಟು ಅನುಭವ ಇರುವವರೇ ಅಲ್ಲವೇ ಎಂಬುದನ್ನು ತಿಳಿಯುವುದರಿಂದಲೂ ಯಾವ ಭೂಪಟ ನಂಬಿಕೆಗೆ ಅರ್ಹ ಎಂಬುದನ್ನು ಗೊತ್ತುಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಭಾರತ ಸರಕಾರದ ಸರ್ವೆ ಆಫ್ ಇಂಡಿಯದವರು ಪ್ರಕಟಿಸುವ ಭಾರತದ ವಿವಿಧ ಭೂಪಟಗಳು ಅಧಿಕಾರಯುತವಾದವು. ರ್‍ಯಾಂಕ್ ಮೆಕ್ನಾಲಿ, ಹ್ಯಾಮಂಡ್ ಮುಂತಾದ ಪ್ರಕಾಶನ ಸಂಸ್ಥೆಗಳು ಭೂಪಟ ಪ್ರಕಾಶನದಲ್ಲಿ ಹೆಸರು ಪಡೆದಿವೆ.

ಪರಿಷ್ಕೃತ ಪ್ರಕಟಣೆಗಳ ಅವಶ್ಯಕತೆ

ಭೌಗೋಳಿಕ ಪ್ರಪಂಚದಲ್ಲಿ ಅನೇಕ ಬದಲಾವಣೆಗಳು ಸದಾ ಆಗುತ್ತಿರುತ್ತವೆ. ಊರು ಅಥವ ದೇಶಗಳ ಹೆಸರುಗಳು ಬದಲಾಗುವುದು ನಮಗೆಲ್ಲ ಗೊತ್ತು. ಕಾರ್ಕಾಹಳ್ಳಿ ಕನಕಪುರ ಆಗಿದ್ದರೆ, ಮೈಸೂರು ರಾಜ್ಯ ಕರ್ನಾಟಕ ಆಗಿದೆ. ಕಾಂಗೋ ದೇಶ ಇಂದು ಜೈಯಿರ್. ಹೊಸ ಹೊಸ ದೇಶಗಳು ರೂಪುಗೊಳ್ಳುವುದೂ ಉಂಟು. ಬಾಂಗ್ಲಾದೇಶ ಇಂಥ ಒಂದು ಉದಾಹರಣೆ. ಅದರ ಹುಟ್ಟಿನೊಡನೆಯೇ ಪಾಕಿಸ್ತಾನದ ಭೂಪಟ ಬದಲಾಯಿತು. ರಾಜಕೀಯ ಸ್ವಾತಂತ್ರ್ಯ ಪಡೆದ ಅನೇಕ ದೇಶಗಳು ಇಂದಿನ ಶತಮಾನದಲ್ಲಿ ತಲೆ ಎತ್ತಿವೆ. ಇಂಥ ಬದಲಾವಣೆಗಳನ್ನು ಒಳಗೊಂಡು ಭೂಪಟಗಳು ಆಗಿಂದಾಗ ಪರಿಷ್ಕೃತವಾಗದಿದ್ದಲ್ಲಿ ಅವುಗಳ ಉಪಯೋಗಕ್ಕೆ ಆತಂಕ ಬರುತ್ತದೆ. ಆದ್ದರಿಂದಲೇ ಹೆಸರಾಂತ ಭೂಪಟ ಪ್ರಕಾಶಕರು ವೆಚ್ಚದ ವಿಚಾರ ಆದರೂ ಆಗಿಂದಾಗ ಪರಿಷ್ಕೃತ ಭೂಪಟಗಳನ್ನು ಪ್ರಕಟಿಸುತ್ತಿರುತ್ತಾರೆ. ಭೂಪಟಗಳನ್ನು ಉಪಯೋಗಿಸುವಾಗ ಅದು ನಿರ್ಮಾಣವಾದ 'ಕಾಪಿರೈಟ್'

ಪರಿಷ್ಕೃತವಾಗಿದ್ದರೆ ಪರಿಷ್ಕೃತವಾದ ವರ್ಷ, ಪುನರ್ ಮುದ್ರಣ ಆದ ವರ್ಷ ಇವುಗಳನ್ನು ಗಮನಿಸುವುದು ಅಗತ್ಯ.

ಭೂ ವಿವರ ನಿಘಂಟುಗಳು (ಗೆಜೆಟಿಯರುಗಳು)

ಭೌಗೋಳಿಕ ವಿಶ್ವಕೋಶಗಳೇ ಭೂ ವಿವರ ನಿಘಂಟು ಗಳೆನ್ನಬಹುದು. ಒಳ್ಳೆಯ ಗೆಜೆಟಿಯರಿನಲ್ಲಿ ಹಳ್ಳಿ, ಊರು, ನಗರ, ನದಿ, ಬೆಟ್ಟ, ಸರೋವರ ಇತ್ಯಾದಿ ಭೌಗೋಳಿಕ ನಾಮಗಳು; ಜನಸಂಖ್ಯೆ, ಅಕ್ಷಾಂಶ, ರೇಖಾಂಶಗಳು; ಹಲವು ವೇಳೆ ಸಂಕ್ಷಿಪ್ತ ಸ್ಥಳಚರಿತ್ರೆ; ಆರ್ಥಿಕ, ರಾಜಕೀಯ, ಸಾಮಾಜಿಕ ಲಕ್ಷಣಗಳ ವಿವರಣೆ ಇರುತ್ತದೆ. ಭಾರತದ ಎಲ್ಲ ಜಿಲ್ಲೆಗಳ ವಿವರಗಳನ್ನು ಕೊಡುವ ಜಿಲ್ಲಾ ಗೆಜೆಟಿಯರುಗಳಿವೆ.

ಪ್ರಯಾಣಿಕರ ಕೈಪಿಡಿಗಳು

ಪ್ರಯಾಣಿಕರ ಉಪಯೋಗವನ್ನು ಮುಖ್ಯ ಗುರಿಯಾ ಗುಳ್ಳ ಕೈಪಿಡಿಗಳು ಗೆಜೆಟಿಯರುಗಳಂತೆಯೇ ಅನೇಕ ಭೌಗೋಳಿಕ ವಿಚಾರಗಳನ್ನು ಸರಳ ಭಾಷೆಯಲ್ಲಿ ಆಕರ್ಷಕ ರೀತಿಯಲ್ಲಿ ನಿರೂಪಿಸುತ್ತವೆ. ಇಂಥ ಕೈಪಿಡಿಗಳು ಒಂದು ನಗರ, ರಾಜ್ಯ, ದೇಶ, ಸ್ಥಳಗಳಿಗೆ ಸೀಮಿತವಾಗಿರಬಹುದು. ಸಂಕ್ಷಿಪ್ತ ಚಾರಿತ್ರಿಕ ಹಿನ್ನಲೆಯನ್ನು ಕೊಡುವುದರ ಜೊತೆಗೆ ಪ್ರಯಾಣ ಮಾರ್ಗಗಳು, ಪ್ರಯಾಣಕ್ಕೆ ಸೂಕ್ತವಾದ ಕಾಲ, ಹೋಟಲುಗಳು, ಪ್ರವಾಸಿ ಮಂದಿರಗಳು, ಬೆಲೆಗಳು ಮುಂತಾದ ವಿವರಗಳನ್ನೂ ಈ ಕೈಪಿಡಿಗಳು ತಿಳಿಸುತ್ತವೆ. ಏನನ್ನಾದರೂ ಕೊಳ್ಳಬೇಕಾದರೆ ಎಲ್ಲಿ ಹೇಗೆ ಕೊಳ್ಳುವುದು ಲಾಭಕರ ಎನ್ನುವ ಸಲಹೆಯನ್ನೂ ಇಲ್ಲಿ ಪಡೆಯಬಹುದು.

ಸ್ಥಳೀಯ ಆಚಾರ ವ್ಯವಹಾರಗಳ ಪರಿಚಯವನ್ನೂ ಇಂಥ ಕೈಪಿಡಿಗಳು ಮಾಡಿಕೊಡುತ್ತವೆ. ಭಾರತವನ್ನು ಕುರಿತ ಫೋಡರ್ ಕೈಪಿಡಿ (Fodor's Guide to India) ಇಂಥ ಒಂದು ಉತ್ತಮ ಉದಾಹರಣೆ.

ನಮ್ಮ ವ್ಯಾಸಂಗ, ಸಂಶೋಧನೆ ಹಾಗೂ ಅನುದಿನದ ಜೀವನದಲ್ಲಿ ಭೌಗೋಳಿಕ ವಿಷಯಮೂಲಗಳ ತಿಳಿವು ಸಹಕಾರಿ ಅಷ್ಟೇ ಅಲ್ಲ, ಅನಿವಾರ್ಯ.

ಕೆಲವು ಪ್ರಮುಖ ಭೌಗೋಳಿಕ ಸಮಾಚಾರಮೂಲಗಳು

1. Gazetteer of India (ಭಾರತ ಭೂ ವಿವರ ನಿಘಂಟು). New Delhi : Ministry of Information and Broadcasting 1965. Vols 1.

   ಭಾರತ ಹಾಗೂ ಭಾರತೀಯರ ವಿವರ ವಿವರಣೆ. ಅನೇಕ ಭೂಪಟಗಳಿವೆ.

2. National Atlas of India (ಭಾರತ ರಾಷ್ಟ್ರೀಯ ಅಟ್ಲಾಸು)

   Calcutta : National Atlas Organization, 1957.

   ಭಾರತದ ವಿವರಣಾತ್ಮಕ ಭೂಪಟಗಳು. ಇಂಗ್ಲಿಷ್ ಹಾಗೂ ಹಿಂದಿಯಲ್ಲಿದೆ.

3. Fodor's Guide to India (ಫೋಡೋರ್ ಭಾರತ ಕೈಪಿಡಿ). New York : Fodor's

Modern Guides, 1962.
ಭಾರತ ನೋಡಬೇಕೆನ್ನುವ ಪ್ರಯಾಣಿಕರ ಉತ್ತಮ ಕೈಪಿಡಿ.

4. The Times Atlas of the World (ಟೈಂಸ್ ಪ್ರಪಂಚದ ಅಟ್ಲಾಸು).
Boston: Houghton Mifflin Co., 1971.

ಇಂಗ್ಲಿಷ್ ಭಾಷೆಯ ಅತ್ಯುತ್ತಮ ಭೂಪಟ ಸಂಗ್ರಹ. ಆಕರ್ಷಕ ವರ್ಣಮಯ ಮುದ್ರಣ. ಪ್ರಪಂಚದ ಖನಿಜ ಸಂಪತ್ತು, ಆಹಾರ ಹಾಗೂ ಶಕ್ತಿ ಮೂಲಗಳನ್ನು ಸೂಚಿಸುವುದಲ್ಲದೆ ಎರಡುಲಕ್ಷ ಸ್ಥಳನಾಮ ಸೂಚಿ ಇದೆ.

5. The New Cambridge Modern History, Altas. (ನವೀನ ಕೇಂಬ್ರಿಡ್ಜ್ ಆಧುನಿಕ ಚರಿತ್ರೆ ಅಟ್ಲಾಸು).

New York: Cambridge University Press, 1970.

ನವೋದಯ ಯುಗದಿಂದ ದ್ವಿತೀಯ ಪ್ರಪಂಚ ಸಂಗ್ರಾಮ ಮುಕ್ತಾಯದವರೆಗಿನ ವಿಷಯಗಳಿಗೆ ಮೀಸಲಾದ 280ಕ್ಕೂ ಹೆಚ್ಚಿನ ಚಾರಿತ್ರಿಕ ಭೂಪಟಗಳನ್ನುಳ್ಳ ಉತ್ತಮ ಅಟ್ಲಾಸು. ಕಾಲಾನುಕ್ರಮದಲ್ಲಿ ವ್ಯವಸ್ಥಿತವಾಗಿದ್ದು ವಿಷಯ ಸೂಚಿ ಇದೆ.

6. webster's New Geographical Dictionary (ವೆಬ್‌ಸ್ಟರನ ನವೀನ ಭೌಗೋಳಿಕ ಶಬ್ದಕೋಶ). G. & C. Merriam Co., 1972.

48 ಸಾವಿರ ಹೆಸರುಗಳು, ವಿವರಣೆ ಉಳ್ಳ ಒಂದು ಸಂಪುಟದ ಭೌಗೋಳಿಕ ಶಬ್ದಕೋಶ.

ಹೆಚ್ಚಿನ ವ್ಯಾಸಂಗಕ್ಕೆ ಸಹಕಾರಿ ಪುಸ್ತಕ

Greenhood, David, Mapping, Chicago: The University of Chicago Press, 1964.

'Maps' article in Encyclopaedia Britannica.

ಸರಕಾರಿ ಪ್ರಕಟಣೆಗಳು

ನಾಗರೀಕತೆಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿರುವ ಜಗತ್ತಿನ ಅತ್ಯಂತ ಪುರಾತನ ಗ್ರಂಥಸ್ಥ ದಾಖಲೆಗಳಲ್ಲಿ ಸರಕಾರಿ ಪ್ರಕಟಣೆಗಳ ಸ್ಥಾನ ದೊಡ್ಡದು. ಆಧುನಿಕ ಸಮಾಜಗಳಲ್ಲಿ ಸರಕಾರಗಳು ಕೇವಲ ಕಾನೂನು, ಶಿಸ್ತುಪಾಲನೆಗಳನ್ನಷ್ಟೇ ಮಾಡದೆ ಜನಜೀವನದ ಎಲ್ಲ ರಂಗಗಳಲ್ಲೂ ಕೆಲಸ ಮಾಡುತ್ತ ಸರ್ವವ್ಯಾಪಿಗಳಾಗಿವೆ. ಸರಕಾರಿ ಪ್ರಕಟಣೆಗಳು ಸರಕಾರಕ್ಕೂ ಪ್ರಜೆಗಳಿಗೂ ಸಂಪರ್ಕ ಕಲ್ಪಿಸುವ ನೇರ ಸಾಧನಗಳು. ಸರಕಾರಗಳ ಕಾರ್ಯಕ್ಷೇತ್ರ ವಿಸ್ತರಿಸಿದಂತೆಲ್ಲ ಅವುಗಳ ಪ್ರಕಟಣಾ ಕಾರ್ಯವೂ ಹೆಚ್ಚುತ್ತಿದೆ. ಇಂದಿನ ಸರಕಾರಗಳು ಅಂಕಿಅಂಶಗಳನ್ನು ಪ್ರಕಟಿಸುವುದರ ಜೊತೆಗೆ ದೇಶದ ಜನ. ಜೀವನ, ಸಂಸ್ಕೃತಿ, ಆರ್ಥಿಕ. ರಾಜಕೀಯ. ಬೌದ್ಧಿಕ ವಿಚಾರಗಳನ್ನು ಪ್ರತಿಬಿಂಬಿಸುವ ಬಹುಸಂಖ್ಯೆಯ ಪ್ರಕಟಣೆಗಳನ್ನು ಹೊರತರುತ್ತಿವೆ. ಒಂದು ದೇಶದ ಅನೇಕ ವಿಚಾರಗಳನ್ನು ಕುರಿತ ಅಧಿಕೃತವಾದ ಆ ದೇಶದ ಸರಕಾರಿ ಪ್ರಕಟಣೆಗಳೇ. ಆದ್ದರಿಂದಲೇ ಒಂದು ದೇಶದ ವಿಚಾರ ತಿಳಿಯಲು. ವ್ಯಾಸಂಗ ಮಾಡಲು ಅಲ್ಲಿನ ಸರಕಾರದ ಪ್ರಕಟಣೆಗಳು ಫಲಕಾರಿ ಸಮಾಚಾರ ಮೂಲಗಳು.

ಭಾರತ ಸರಕಾರದ ಪ್ರಕಟಣೆಗಳು

ಭಾರತ ಸರಕಾರ ಇಡೀ ರಾಷ್ಟ್ರದಲ್ಲಿ ಎಲ್ಲ ಪ್ರಕಾಶಕರಿಗಿಂತ ಹೆಚ್ಚು ಸಂಖ್ಯೆಯ ಪುಸ್ತಕಗಳನ್ನು ಪ್ರಕಟಿಸುತ್ತದೆ.

ಪುಸ್ತಕಗಳ ಸಂಖ್ಯೆಯಷ್ಟೇ ಅಲ್ಲದೆ ಅವುಗಳ ವೈವಿಧ್ಯತೆಯಲ್ಲಿಯೂ ಸರಕಾರವನ್ನು ಮೀರಿಸುವ ಪ್ರಕಾಶಕರು ರಾಷ್ಟ್ರದಲ್ಲಿಲ್ಲ. ಪಂಡಿತಪಾಮರರೆಲ್ಲರಿಗೂ ಉಪಯುಕ್ತವಾದ ನೂರಾರು ಪ್ರಕಟಣೆಗಳು ಸರಕಾರಿ ಮೂಲದವು. ಭಾರತ ಸರಕಾರದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಬಗೆಬಗೆಯ ಪ್ರಕಟಣೆಗಳನ್ನು ಹೊರತರುತ್ತಿರುತ್ತವೆ. ಕಾನೂನುಗಳು, ನ್ಯಾಯಾಲಯಗಳ ತೀರ್ಮಾನಗಳು; ಆಡಳಿತ ರಿಪೋರ್ಟುಗಳು; ಮಸೂದೆ, ನಿರ್ಣಯಗಳು; ಸಮಿತಿ ಸಭೆಗಳ ಚರ್ಚೆಯ ವಿವರಗಳು; ಲೋಕಸಭೆ, ರಾಜ್ಯಸಭೆಗಳ ಕಾರ್ಯಕಲಾಪಗಳು; ಪಂಚವಾರ್ಷಿಕ ಯೋಜನೆಗಳ ವಿವರ, ಸರಕಾರದ ಸಾಧನೆಗಳು ; ನೂರಾರು ಬಗೆಯ ಅಂಕಿಅಂಶಗಳು ಸರಕಾರಿ ಪ್ರಕಟಣೆಗಳ ಕೆಲವು ವಸ್ತುಗಳು. ಇಷ್ಟೇ ಅಲ್ಲದೆ ಇಂದಿನ ಪ್ರಪಂಚದಲ್ಲಿ ಸರಕಾರಗಳೇ ಅಧಿಕೃತ ಭೂಪಟ ಪ್ರಕಾಶಕರು. ಭಾರತ ಸರಕಾರ ದೇಶದ ಜನಸಂಖ್ಯೆ, ಮಳೆ ಬೆಳೆ, ಭೂಗುಣ, ಖನಿಜ ಸಂಪತ್ತು, ಸಂಪರ್ಕಸಾಧನಗಳು ಇತ್ಯಾದಿ ಅನೇಕ ವಿಚಾರಗಳ ಪ್ರತ್ಯೇಕ ಭೂಪಟಗಳನ್ನೂ ಬಹು ಸಂಖ್ಯೆಯಲ್ಲಿ ಪ್ರಕಟಿಸುತ್ತದೆ.

ಪ್ರಚಾರ ಸಾಹಿತ್ಯ, ಪ್ರಕಟಣೆಗಳಲ್ಲಿ ಒಂದು ಪ್ರಮುಖ ವಿಭಾಗ. ಪ್ರಚಾರವನ್ನೇ ಮುಖ್ಯ ಉದ್ದೇಶವಾಗುಳ್ಳ ಅನೇಕ ಪ್ರಕಟಣೆಗಳನ್ನು ಭಾರತ ಸರಕಾರ ಪ್ರಕಟಿಸುತ್ತಿದ್ದು ಅವು ದೇಶ ವಿದೇಶಗಳಲ್ಲಿ ಹಂಚಿಕೆ ಆಗುತ್ತವೆ. ಸರಕಾರ ಪುಸ್ತಕ, ಭೂಪಟಗಳನ್ನು ಪ್ರಕಟಿಸುವುದರ ಜೊತೆಗೆ ಅನೇಕ ನಿಯತ ಕಾಲಿಕಗಳನ್ನೂ ಪ್ರಕಟಿಸುತ್ತದೆ. ನಾನಾ ಕ್ಷೇತ್ರಗಳಿಗೆ ಸಂಬಂಧಿಸಿದ ಇನ್ನೂರಕ್ಕೂ ಹೆಚ್ಚು ಸಂಖ್ಯೆಯ ನಿಯತಕಾಲಿಕಗಳು

ಭಾರತ ಸರಕಾರದ ಪ್ರಕಟಣೆಗಳು. Agricultural Marketing ವ್ಯವಸಾಯ ಮಾರುಕಟ್ಟೆಗೆ ಸಂಬಂಧಪಟ್ಟ ನಿಯತಕಾಲಿಕ. ಆದರೆ Indian Labor Journal ಭಾರತೀಯ ಕಾರ್ಮಿಕ ಸಮಸ್ಯೆಗಳಿಗೂ Mines and Minerals ಗಣಿಗಳು ಹಾಗೂ ಖನಿಜಗಳಿಗೂ. Yojana ಸರಕಾರದ ಪಂಚವಾರ್ಷಿಕ ಯೋಜನೆಗಳಿಗೂ ಸಂಬಂಧಪಟ್ಟವು. ಭಾರತ ಸರಕಾರದ ವಿಜ್ಞಾನ ಹಾಗೂ ಔದ್ಯಮಿಕ ಸಂಶೋಧನ ಕೇಂದ್ರ (Council of Scientific and Industrial Research) ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ Journal of Chemistry, ತಾಂತ್ರಿಕ ವಿಚಾರಗಳಿಗೆ ಮೀಸಲಾದ Journal of Technology ಮುಂತಹ ಹತ್ತಾರು ವೈಜ್ಞಾನಿಕ ವಿಚಾರಗಳ ನಿಯತಕಾಲಿಕಗಳನ್ನು ಪ್ರಕಟಿಸುತ್ತದೆ. ಭಾರತದ ಕಚ್ಚಾ ಪದಾರ್ಥಗಳು ಹಾಗೂ ಕೈಗಾರಿಕೋತ್ಪನ್ನಗಳ ಸಂಪೂರ್ಣ ವಿವರ ಕೊಡುವ Wealth of India ವಿಶ್ವಕೋಶ ಈ ಸಂಸ್ಥೆಯ ಒಂದು ಪ್ರಕಟಣೆ.

ಭಾರತ ಸರಕಾರದ ನಾನಾ ವಿಭಾಗಗಳು ಪ್ರತಿ ವರ್ಷ ಎರಡು ಸಾವಿರಕ್ಕೂ ಹೆಚ್ಚು ಸಂಖ್ಯೆಯ ಗ್ರಂಥಗಳನ್ನು ಪ್ರಕಟಿಸುತ್ತಿದ್ದು ಅವು ವಿಜ್ಞಾನ, ಸಮಾಜಶಾಸ್ತ್ರ, ಸಾಹಿತ್ಯ ಹಾಗೂ ಲಲಿತಕಲೆಗಳಿಗೆ ಸಂಬಂಧಪಟ್ಟಿವೆ. ಸಾಹಿತ್ಯ ಅಕಡೆಮಿ, Childrens Book Trust, National Book Trust ಮೊದಲಾದ ಸರಕಾರದ ಬೆಂಬಲವುಳ್ಳ ಸಂಸ್ಥೆಗಳು ದೇಶದ ಸಾಹಿತ್ಯಸಂಪತ್ತನ್ನು ಉಳಿಸಿ, ಬೆಳೆಸಲು ನೂರಾರು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ನಾನಾ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಸೂಚಿಗಳನ್ನೂ ಸರಕಾರ ಪ್ರಕಟಿಸು

ವುದುಂಟು. ಭಾರತ ಸರಕಾರದ ಸುದ್ದಿ ಮತ್ತು ಬಾನುಲಿ ಶಾಖೆಯ ಅಂಗವಾಗಿರುವ ಪ್ರಕಟಣ ವಿಭಾಗ ಸರಕಾರದ ಬಹು ಸಂಖ್ಯಾಂತ ಪ್ರಕಟಣೆಗಳನ್ನು ಹೊರತರುತ್ತದೆ. ಈ ವಿಭಾಗ ಪ್ರಕಟಿಸುವ India : A Reference Annual ಭಾರತದ ಬಗ್ಗೆ ಇರುವ ಒಳ್ಳೆಯ ವಾರ್ಷಿಕ ಆಕರ ಗ್ರಂಥ. ಭಾರತ ಕುರಿತ ಅಧಿಕೃತ ಅಂಕಿಅಂಶ, ಸಂಕ್ಷಿಪ್ತ ವಿಚಾರಗಳನ್ನು ತಿಳಿಯಲು ಇರುವ ಒಂದು ಉತ್ತಮ ಸಾಧನ.

ಭಾರತ ಸರಕಾರದ ಬಹುಸಂಖ್ಯಾತ ಪ್ರಕಟಣೆಗಳು ಇಂಗ್ಲಿಷ್‌ನಲ್ಲೂ, ಕೆಲವು ಹಿಂದಿಯಲ್ಲೂ ಅತ್ಯಲ್ಪ ಸಂಖ್ಯೆಯ ಪ್ರಕಟಣೆಗಳು ರಾಜ್ಯ ಭಾಷೆಗಳಲ್ಲೂ ಇವೆ. 'ಭಾರತ ರಾಷ್ಟ್ರ ಗ್ರಂಥಸೂಚಿ' ಸರಕಾರಿ ಪ್ರಕಟಣೆಗಳ ವಿವರಗಳನ್ನೂ ಕೊಡುತ್ತದೆ. ಅನೇಕ ಪ್ರಕಟಣೆಗಳು ಮುದ್ರಣ, ಕಾಗದ, ಅಚ್ಚಿನ ಮಸಿ, ಅಂದಚೆಂದಗಳು ಅಷ್ಟೇನೂ ತೃಪ್ತಿಕರವಲ್ಲದಿದ್ದರೂ ಸಾಮಾನ್ಯವಾಗಿ ಅವುಗಳ ಬೆಲೆ ಸರಕಾರೇತರ ಪ್ರಕಟಣೆಗಳಿಗಿಂತ ಕಡಿಮೆ. ಲಾಭದೃಷ್ಟಿಯಿಲ್ಲದೆ, ನಷ್ಟದ ಯೋಚನೆ ಇಲ್ಲದೆ ಸರಕಾರ ಕೆಲಸ ಮಾಡಬಲ್ಲದೆಂಬುದು ಇದಕ್ಕೆ ಮುಖ್ಯ ಕಾರಣ. ಸರಕಾರದ ಪ್ರಕಟಣೆಗಳು ಸರಕಾರದ ಮನ್ನಣೆ ಪಡೆದ ಏಜೆಂಟರಲ್ಲಿ ದೊರೆಯುತ್ತವೆ. ಕೆಳಕಂಡ ವಿಳಾಸಕ್ಕೆ ಬರೆಯುವುದರಿಂದ ಮಾರಾಟಕ್ಕಿರುವ ಸರಕಾರಿ ಪ್ರಕಟಣೆಗಳ ಪಟ್ಟಿಗಳನ್ನು ಪಡೆಯಬಹುದು.

Manager of publications (GOI)
Civil Lines
New Delhi - 110 006

ರಾಜ್ಯಸರಕಾರಗಳ ಪ್ರಕಟಣೆಗಳು

ಭಾರತ ಸರಕಾರದಂತೆಯೇ ರಾಜ್ಯ ಸರಕಾರಗಳೂ ಅನೇಕ ಬಗೆಯ ಪ್ರಕಟಣೆಗಳನ್ನು ಹೊರಡಿಸುತ್ತವೆ. ಸಾಮಾನ್ಯವಾಗಿ ಆಯಾ ರಾಜ್ಯಕ್ಕೆ ಸಂಬಂಧಿಸಿದ ಅಂಕಿಅಂಶಗಳು, ರಾಜ್ಯದ ಪಂಚವಾರ್ಷಿಕ ಯೋಜನೆಗಳು, ರಾಜ್ಯ ಭಾಷೆಯ ಸಾಹಿತ್ಯ, ರಾಜ್ಯದ ಚರಿತ್ರೆ, ಜನಜೀವನಗಳಿಗೆ ಪ್ರಾಮುಖ್ಯತೆ ಇದ್ದು ಅನೇಕ ಪ್ರಕಟಣೆಗಳು ರಾಜ್ಯದ ಭಾಷೆಯಲ್ಲಿ ಇರುತ್ತವೆ. ಕರ್ನಾಟಕ ಸರಕಾರದ ಸಾಹಿತ್ಯ ಹಾಗೂ ಸಂಸ್ಕೃತಿ ಅಭಿವೃದ್ಧಿ ಇಲಾಖೆ ಅನೇಕ ಜನೋಪಯುಕ್ತ ಗ್ರಂಥಗಳನ್ನು ಕಡಿಮೆ ಬೆಲೆಯಲ್ಲಿ ಪ್ರಕಟಿಸಿದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಹಾಯದಿಂದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು, ಸಾಹಿತ್ಯ ಪರಿಷತ್ತುಗಳು ಅನೇಕ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿವೆ. ಮೈಸೂರು, ಕರ್ನಾಟಕ. ಬೆಂಗಳೂರು ವಿಶ್ವವಿದ್ಯಾನಿಲಯಗಳೂ, ಕನ್ನಡ ಸಾಹಿತ್ಯ ಪರಿಷತ್ತೂ ಅನೇಕ ಗ್ರಂಥಗಳನ್ನು ಲಾಭಾಪೇಕ್ಷೆ ಇಲ್ಲದೆ ಕನ್ನಡದಲ್ಲಿ ಪ್ರಕಟಿಸಿವೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶ. ಬೆಂಗಳೂರು ವಿಶ್ವವಿದ್ಯಾಲಯದ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಮುಂತಾದ ಬೃಹತ್ಪ್ರಕಟಣೆಗಳನ್ನು ಹೆಸರಿಸಬಹುದು. ಈ ಸಂಸ್ಥೆಗಳಿಂದ ನೇರವಾಗಿ ಅವುಗಳ ಪ್ರಕಟಣೆಗಳ ಪಟ್ಟಿಗಳನ್ನು ಪಡೆಯಬಹುದು.

ವಿದೇಶಗಳ ಸರಕಾರಗಳು ಹಾಗೂ ಅಂತರ್ರಾಷ್ಟ್ರೀಯಸಂಸ್ಥೆಗಳ ಪ್ರಕಟಣೆಗಳು

ಭಾರತ ಸರಕಾರದಂತೆಯೇ ಜಗತ್ತಿನ ಎಲ್ಲ ದೇಶಗಳ ಸರಕಾರಗಳೂ ಅನೇಕ ಪ್ರಕಟಣೆಗಳನ್ನು ಹೊರತರುತ್ತಿರುತ್ತವೆ. ಜ್ಞಾನಾಕಾಂಕ್ಷೆ ಇರುವ ವಿದ್ಯಾರ್ಥಿ ಅವನ್ನು ಅಲಕ್ಷಿಸುವಂತಿಲ್ಲ, ಬ್ರಿಟಿಷ್ ಸರಕಾರ ಪ್ರತಿವರ್ಷ ಏಳು ಸಾವಿರಕ್ಕೂ ಹೆಚ್ಚಿನ ಪ್ರಕಟಣೆಗಳನ್ನು ಹೊರತರುತ್ತದೆ. ಸದಾಕಾಲ ಒಂದು ಲಕ್ಷ ಸಂಖ್ಯೆಯ ವಿವಿಧ ಗ್ರಂಥಗಳು ಮಾರಾಟಕ್ಕೆಂದು **Her Majesty's Printing Office** ಪ್ರತಿವರ್ಷ 500 ಲಕ್ಷ ರೂಗಳಿಗೂ ಹೆಚ್ಚು ಬೆಲೆಯ ಪುಸ್ತಕಗಳನ್ನು ಮಾರಾಟ ಮಾಡುತ್ತದೆ. ಅಂತೆಯೇ ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೇಂದ್ರ ಸರಕಾರ ಸಹಸ್ರಾರು ಸಂಖ್ಯೆಯ ಪುಸ್ತಕಗಳನ್ನು ಪ್ರತಿ ವರ್ಷ ಪ್ರಕಟಿಸುತ್ತದೆ. ಇಂಥ ಪ್ರಕಟಣೆಗಳಲ್ಲಿ ಹಲವು ಭಾರತಕ್ಕೆ ಸಂಬಂಧಪಟ್ಟವು.

ಕಾಮನ್ ವೆಲ್ತ್, ವಿಶ್ವಸಂಸ್ಥೆ ಮುಂತಾದ ಅಂತರ್ರಾಷ್ಟ್ರೀಯ ಸಂಸ್ಥೆಗಳೂ ಅನೇಕ ಪುಸ್ತಕ, ನಿಯತ ಕಾಲಿಕಗಳನ್ನು ಪ್ರಕಟಿಸುತ್ತವೆ. ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳ ಅಧಿಕೃತ ಅಂಕಿಅಂಶಗಳನ್ನು ಕ್ರೋಢೀಕರಿಸಿ ಆಗಿಂದಾಗ ಪ್ರಕಟಿಸುತ್ತದೆ. ಜಗತ್ತಿನ ಸಮಸ್ಯೆಗಳನ್ನು ಕುರಿತ ಹಲವಾರು ಪ್ರಮುಖ ಪ್ರಕಟಣೆಗಳು ವಿಶ್ವಸಂಸ್ಥೆಯವು. **Organization of American States** ಅಮೆರಿಕ ಖಂಡಗಳ ದೇಶಗಳ ಹಲವು ಸಮಸ್ಯೆಗಳನ್ನು ಕುರಿತ ಗ್ರಂಥಗಳನ್ನು ಪ್ರಕಟಿಸುತ್ತದೆ. ಹಾಗೆಯೇ **Organization of African States** ನ ಪ್ರಕಟಣೆಗಳೂ ಉಂಟು.

ಇಂದಿನ ದಕ್ಷ ವಿದ್ಯಾರ್ಥಿ ತನಗೆ ಬೇಕಾದ ಅಂಕಿಅಂಶ, ವಿಚಾರಗಳನ್ನು ಕಂಡುಕೊಂಡು ಸತ್ಯಾನ್ವೇಷಣೆ ಮಾಡುವಾಗ ರಾಜ್ಯ, ರಾಷ್ಟ್ರ, ಪರರಾಷ್ಟ್ರ, ಅಂತರ್ರಾಷ್ಟ್ರೀಯ ಸಂಸ್ಥೆಗಳ ಪ್ರಕಟಣೆಗಳನ್ನು ಸಮಯೋಚಿತವಾಗಿ ಉಪಯೋಗಿಸುವುದು ಅತ್ಯಗತ್ಯ.

ಹೆಚ್ಚಿನ ವ್ಯಾಸಂಗಕ್ಕೆ ಸಹಾಯಕವಾದ ಪುಸ್ತಕ, ಲೇಖನ ಸೂಚಿ

Childs, James Bennett. Government Publications (Documents). Encyclopaedia of Library and Information Science. V 10. PP. 36-140, New york : Dekker, 1973.

Childs, James. Bennett. ''Reference use of official publications of National Governments,'' Herald of Library Science. October 1971, PP. 3274.

Mahinder Singh and Pandya, J.F. Government Publications of India : A Survey of Their Nature, Bibliographic control and Distrbution Systems. Delhi : Metropolitan Book Co., 1967.

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲ
33.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್